Office of the,
Joint Director
Local Audit circle, , 4th Floor, T.T.M.C.Building, 'A' Block,
B.M.T.C., Shanthinagar,
Bangalore-560027.

ಕರ್ನಾಟಕ ಸರಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಜಂಟಿ ನಿರ್ದೇಶಕರ ಕಚೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
4ನೇ ಮಹಡಿ,
ಟಿ.ಟಿ.ಎಂ.ಸಿ ಕಟ್ಟಡ,
'ಎ' ಬ್ಲಾಕ್, ಬಿ.ಎಂ.ಟಿ.ಸಿ, ಶಾಂತಿನಗರ,
ಬೆಂಗಳೂರು-27.

ಸಂಖ್ಯೆ:ಸ್ಥಲೆಪವ/ಬೆಂ/ಕಾ.ವಿ/2023-24/1356 ದಿನಾಂಕ: 27/08/2024

ಇವರಿಗೆ,
ಸದಸ್ಯ ಕಾರ್ಯದರ್ಶಿಗಳು,
ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ
ಪ್ರದೇಶ ಯೋಜನಾ ಪ್ರಾಧಿಕಾರ,
333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್,
ಸೂಲಿಬೆಲೆ ರಸ್ತೆ, ದೇವನಹಳ್ಳಿ – 562110
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಮಾನ್ಯರೆ,

ವಿಷಯ: 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಕಳುಹಿಸುವ ಬಗ್ಗೆ

*****

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರ, ಈ ಸಂಸ್ಥೆಯ 2023–24ನೇ ಸಾಲಿನ ಲೆಕ್ಕತನಿಖೆಯು ಮುಗಿದಿದ್ದು, ಸದರಿ ಲೆಕ್ಕತನಿಖಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ ಹಾಗೂ ಈ ವರದಿಯ ಕಂಡಿಕೆಗಳಲ್ಲಿ ಗಮನಿಸಿರುವ ಲೋಪದೋಶಗಳು ಹಾಗೂ ವಸೂಲಾತಿ ಕಂಡಿಕೆಗಳ ಮೇಲೆ ಅಗತ್ಯ ಕ್ರಮ ತೆಗೆದುಕೊಂಡು ಅನುಸರಣಾ ವರದಿಯನ್ನು ಸೂಕ್ತ ಪ್ರಾಧಿಕಾರದ ಮೂಲಕ ಕೂಡಲೇ ಕಳುಹಿಸಿ ಕೊಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಬೆಂಗಳೂರು

ಪ್ರತಿಯನ್ನು:

1. ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶ ಅಭಿವೃದ್ಧಿ ಯೋಜನಾ ಪ್ರಾಧಿಕಾರ,ಆಲಿ ಆಸ್ಕರ್ ರಸ್ತೆ, ಬೆಂಗಳೂರು.
2. ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕೆ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 3ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, 'ಎ' ಬ್ಲಾಕ್, ಶಾಂತಿನಗರ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೊಡಿಯಂ ಬ್ಲಾಕ್, ವಿ.ವಿ ಗೋಪುರ, ಬೆಂಗಳೂರು.
4. ಕಚೇರಿ ಪ್ರತಿ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ (ಬಿಐಎಎಪಿಎ), ದೇವನಹಳ್ಳಿ ಸಂಸ್ಥೆಯ 2023–24ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳು, ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತದ ವಿವರಗಳು

(ರೂ.ಗಳಲ್ಲಿ)

ಕ್ರ.ಸಂ	ಕಂಡಿಕೆ ಸಂಖ್ಯೆ	ವಿವರಗಳು		ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1.	4	ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ ಅನುಸರಣಾ ವರದಿ ಸಕ್ಷಮ ಪ್ರಾದಿಕಾರದ ಮೂಲಕ ಸಲ್ಲಿಸದಿರುವುದು.		0	0
2.	13	ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯಲ್ಲಿನ ನ್ಯೂನತೆಗಳು		0	0
3.	14	ವಾರ್ಷಿಕ ಲೆಕ್ಕಪತ್ರಗಳಲ್ಲಿನ ನ್ಯೂನತೆಗಳು		0	0
4.	18	ಕೆರೆಗಳ ಪುನಶ್ಚೇತನ ಶುಲ್ಕ ವಸೂಲಿಸಿ ಕೆರೆ ಅಭಿವೃದ್ಧಿಗೆ ನಿಗಧಿಪಡಿಸಿರುವ ಹಣ ಉಪಯೋಗಿಸದೆ ಅಭಿವೃದ್ಧಿ ಕುಂಠಿತವಾಗಿರುವುದು.		0	0
5.	24	ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಟ 5 ವರ್ಷ ಮುಗಿದಿದ್ದರೂ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ವಿವರ		0	0
6.	25	ಸೆಸ್ & ಸರ್‌ಚಾರ್ಜ್‌ಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡದಿರುವುದು.	ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿ	14106293.00	0
			ವರ್ತುಲ ರಸ್ತೆ ಅಭಿವೃದ್ಧಿ	14106293.00	0
			ಕೊಳಚೆ ಪ್ರದೇಶಗಳ ಅಭಿವೃದ್ಧಿ	7053997.00	0
			ಸಮೂಹ ಸಾರಿಗೆ ವ್ಯವಸ್ಥೆ ಅಭಿವೃದ್ಧಿ	52830859.00	0
7.	28	ಯೋಜನಾ ಪ್ರಾಧಿಕಾರದ "ಮಹಾಯೋಜನೆ 2021" ಅವಧಿ ಮುಗಿದಿರುವುದು		0	0
		ಒಟ್ಟು ರೂ.		**88097442.00**	**0.00**

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಬೆಂಗಳೂರು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ (ಬಿಐಎಎಪಿಎ), ದೇವನಹಳ್ಳಿ ಸಂಸ್ಥೆಯ 2023–24 ನೇ ಸಾಲಿನ ಲೆಕ್ಕ ಪರಿಶೋಧನ ವರದಿ

ಭಾಗ–1

1. ಪೀಠಿಕೆ

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/142/ಎಂಎನ್ಎಕ್ಸ್/95 ದಿನಾಂಕ: 29–02–1996 ರಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರವನ್ನು ಪ್ರಾರಂಭಿಸಲಾಗಿರುತ್ತದೆ.

ಧ್ಯೇಯೋದ್ದೇಶಗಳು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರದೇಶದ ಯೋಜನಾಬದ್ಧ ಬೆಳವಣಿಗಾಗಿ ಮಹಾಯೋಜನೆ (Master Plan) ತಯಾರಿಸುವುದು ಅಭಿವೃದ್ಧಿ ಚಟುವಟಿಕೆಗಳು ಹಾಗೂ ಬೆಳವಣಿಗೆಗಳನ್ನು ಯೋಜನಾಬದ್ಧವಾಗಿ ನಿಯಂತ್ರಿಸುವುದು.

ವ್ಯಾಪ್ತಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 142 ಎಂಎನ್ಎಕ್ಸ್ 95 ದಿನಾಂಕ: 12–01–1996 ರಂದು ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು ದಿನಾಂಕ:29–02–1996 ರಂದು ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಸದರಿ ಯೋಜನಾ ಪ್ರದೇಶಕ್ಕೆ ಕೆಲವೊಂದು ಗ್ರಾಮಗಳನ್ನು ಸೇರಿಸಿ ಅಧಿಸೂಚನೆ ಸಂಖ್ಯೆ:ನಅಇ/142/ಎಂಎನ್ಎಕ್ಸ್/95 ದಿನಾಂಕ:14–05–1997ರಂತೆ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 4(ಸಿ) ರಡಿಯಲ್ಲಿ ಅಂತಿಮವಾಗಿ ಹಲವು ಪರಿಷ್ಕರಣೆಗಳ ನಂತರ ಪ್ರಸ್ತುತ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶವು 228 ಗ್ರಾಮಗಳನ್ನೊಳಗೊಂಡಿದ್ದು 451.22 ಚ.ಕಿ.ಮೀ ವಿಸ್ತೀರ್ಣವಿರುತ್ತದೆ.

ಕರ್ನಾಟಕ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಆಕ್ಟ್ 1961 ಕಾಯ್ದೆ 68ಸಿ(2) ರ ಪ್ರಕಾರ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯವರಿಂದ ವಾರ್ಷಿಕ ಲೆಕ್ಕ ತಪಾಸಣೆ ಮಾಡುವ ಅಧಿಕಾರವಿರುತ್ತದೆ. ಅದರಂತೆ, ಪ್ರಧಾನ ನಿರ್ದೇಶಕರು,ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆರವರ ಪರವಾಗಿ ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಬೆಂಗಳೂರು ರವರು 2023–24ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ನ್ಯೂನತೆಗಳನ್ನು ಪ್ರಸ್ತಾಪಿಸಿ ವರದಿಯನ್ನು ಬಿಡುಗಡೆ ಮಾಡಲಾಗಿದೆ. ವರದಿ ಬಿಡುಗಡೆಯಾದ 6ವಾರಗಳೊಳಗಾಗಿ ಕಂಡಿಕೆವಾರು ಉತ್ತರಗಳನ್ನು ಸಿದ್ದಪಡಿಸಿ ಸಕ್ಷಮ ಪ್ರಾಧಿಕಾರದ ಷರಾ/ಶಿಫಾರಸ್ಸಿನೊಂದಿಗೆ ಕಳುಹಿಸಬೇಕಾಗಿದ್ದು, ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಿಗೆ ಇದನ್ನು ಪಾಲಿಸಿರುವುದಿಲ್ಲ. ಇನ್ನು ಮುಂದೆ ವರದಿ ತಲುಪಿದ 6 ವಾರಗಳೊಳಗಾಗಿ ಅನುಸರಣಾ ವರದಿಯನ್ನು ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸುವಂತೆ ಸೂಚಿಸಲಾಗಿದೆ.

2. ಲೆಕ್ಕಪರಿಶೋಧನಾ ತಂಡದ ವಿವರ

ಲೆಕ್ಕಪರಿಶೋಧಕರ ಹೆಸರು	ಶ್ರೀ ಸುರೇಶ್. ಎಂ. ಲೆಕ್ಕಪರಿಶೋಧನಾಧಿಕಾರಿ ಶ್ರೀಮತಿ ಲತಾ ಆರ್. ಲೆಕ್ಕಪರಿಶೋಧಕರು
ಲೆಕ್ಕಪರಿಶೋಧನಾಅವಧಿ	2023–24
ಲೆಕ್ಕ ತನಿಖೆ ಪ್ರಾರಂಭ ದಿನಾಂಕ	18.04.2024
ಲೆಕ್ಕ ತನಿಖೆ ಮುಕ್ತಾಯ ದಿನಾಂಕ:	29.04.2024
ಉಪಯೋಗಿಸಿದ ಮಾನವ ದಿನಗಳು	18 ಏಕ ಮಾನವ ದಿನಗಳು
ಪುನರ್ ಪರಿಶೀಲನಾಧಿಕಾರಿ ಹೆಸರು	ಶ್ರೀ ನಾಗರಾಜ ಶೇರೆಗಾರ್, ಕೆ.ಎಸ್.ಎ.ಎಸ್ ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಬೆಂಗಳೂರು
ಪುನರ್ ಪರಿಶೀಲನಾ ದಿನಾಂಕ:	18.07.2024

3. ಪ್ರಾಧಿಕಾರದ ಆಡಳಿತ ವರ್ಗದ ವಿವರ: ಶ್ರೀ/ಶ್ರೀಮತಿ

ಹುದ್ದೆಯ ವಿವರ	ಹೆಸರು	ಅವಧಿ	
		ಇಂದ	ವರೆಗೆ
ಅಧ್ಯಕ್ಷರು	ಶ್ರೀ ರಾಕೇಶ್ ಸಿಂಗ್ ಭಾ.ಆ.ಸೇ	08/06/2023	10/03/2024
	ಶ್ರೀ ವಿ. ಶಾಂತಕುಮಾರ್	11/03/2024	31/03/2024
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು	ಶ್ರೀ ಎನ್.ಎಂ ನಂಜೇಗೌಡ	01/04/2023	31/03/2024
ನಗರ ಮತ್ತು ಗ್ರಾಮಾಂತರ ಯೋಜನಾ ಉಪನಿರ್ದೇಶಕರು	ಶ್ರೀ ಜೆ. ಮಂಜುನಾಥ್	01/04/2023	31/03/2024
ನಗರ ಮತ್ತು ಗ್ರಾಮಾಂತರ ಸಹಾಯಕ ನಿರ್ದೇಶಕರು	ಶ್ರೀ ಸಿ. ನವೀನ್ ನಾಯ್ಕ್	01/04/2023	31/03/2024
ನಗರ ಯೋಜಕರು	ಶ್ರೀ ಕೆ. ವಿ. ರವಿಕಿರಣ್	01/04/2024	31/03/2024
	ಕು॥ ಶ್ವೇತ ಹೆಗ್ಡೆ	01/04/2024	31/03/2024
ಪ್ರಥಮ ದರ್ಜೆ ಸಹಾಯಕ	ಶ್ರೀ. ಕೆ. ನವೀನ್‌ಕುಮಾರ್	01/04/2024	31/03/2024

4. ಹಿಂದಿನ ಸಾಲಿನ ಲೆಕ್ಕ ತಪಾಸಣಾ ವರದಿಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸದಿರುವುದು.

1996–97ನೇ ಸಾಲಿನಿಂದ 2005–06ನೇ ಸಾಲಿನವರೆಗೆ ಒಂದು ಬಾರಿ ಲೆಕ್ಕಪರಿಶೋಧನೆ ನಡೆದಿದ್ದು ನಂತರ 2006–07 ರಿಂದ 2022–23ರವರೆಗೆ ಪ್ರತಿ ವರ್ಷ ಲೆಕ್ಕಪರಿಶೋಧನೆ ನಡೆದಿದ್ದು,ಈ ಲೆಕ್ಕಪರಿಶೋಧನಾವರದಿಗಳಿಗೆ ಅನುಸರಣಾ ವರದಿಯನ್ನು ಸಕ್ಷಮ ಪ್ರಾಧಿಕಾರದ ಮೂಲಕ ನಿಯಮಾನುಸಾರ ಸಲ್ಲಿಸಿರುವುದಿಲ್ಲ. ಇದರಿಂದಾಗಿ, ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಲಾದ ಅಧಿಕಾರಿ ಸಿಬ್ಬಂದಿಗಳು ವರ್ಗಾವಣೆ, ನಿವೃತ್ತಿ ಅಥವಾ ಮರಣ ಪ್ರಕರಣಗಳಿಂದಾಗಿ ಪ್ರಾಧಿಕಾರಕ್ಕೆ ಸಕಾಲದಲ್ಲಿ ಬರಬೇಕಾದ ಬಾಕಿ ಮೊತ್ತಗಳು ಬಾರದೇ, ಕಂಡಿಕೆಗಳು

ತೀರುವಳಿಯಾಗದೇ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಆದರಿಂದ, ವಿಳಂಬ ಮಾಡದೆ ಕಂಡಿಕೆವಾರು ಅನುಸರಣಾ ವರದಿಯನ್ನು ನಿಗಧಿತ ಅವಧಿಯೊಳಗೆ ಕ್ರಮ ಕೈಗೊಂಡ ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸಲು ಮತ್ತು ಕಂಡಿಕೆಗಳನ್ನು ತೀರುವಳಿಗೊಳಿಸಲು ಕ್ರಮವಹಿಸುವುದು. ಅದಾಗ್ಯೂ ಪ್ರಸಕ್ತ ಸಾಲಿನಲ್ಲಿ ಹಿಂದಿನ ಸಾಲುಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಿದ್ದು, ಅದರ ತೀರುವಳಿ ಮತ್ತು ಬಾಕಿ ಕಂಡಿಕೆ ವಿವರಗಳು ಈ ಮುಂದಿನಂತಿದೆ.

(ರೂ.ಗಳಲ್ಲಿ)

ಸ್ಲ.ನಂ	ಅವಧಿ	ಆರಂಭಿಕ ಶಿಲ್ಕು				ತೀರುವಳಿ ವಿವರ				31-03-2021 ಕ್ಕೆ ಬಾಕಿ ಇರುವ ವಿವರ			
		ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆಗಳ ಸಂಖ್ಯೆ	ವಸೂಲಾತಿ ಮೊತ್ತ	ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆಗಳ ಸಂಖ್ಯೆ	ವಸೂಲಾತಿ ಮೊತ್ತ	ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆಗಳ ಸಂಖ್ಯೆ	ವಸೂಲಾತಿ ಮೊತ್ತ
1	1996-97 2005-06	6	2820499	11	1761674	0	0	0	0	6	2820499	11	1761674
2	2006-07	3	423171	0	0	0	0	0	0	3	423171	0	0
3	2007-08	0	0	0	0	0	0	0	0	0	0	0	0
4	2008-09	0	0	0	0	0	0	0	0	0	0	0	0
5	2009-10	1	39500	0	0	0	0	0	0	1	39500	0	0
6	2010-11	2	70570401	0	0	0	0	0	0	2	70570401	0	0
7	2011-12	1	23196	0	0	0	0	0	0	1	23196	0	0
8	2012-13	0	0	0	0	0	0	0	0	0	0	0	0
9	2013-14	0	0	0	0	0	0	0	0	0	0	0	0
10	2014-15	0	0	0	0	0	0	0	0	0	0	0	0
11	2015-16	2	81941978	0	0	0	0	0	0	2	81941978	0	0
12	2016-17	2	214137088	0	0	0	0	0	0	2	214137088	0	0
13	2017-18	2	431109739	0	0	0	0	0	0	2	431109739	0	0
14	2018-19	3	1042749979	0	0	0	0	0	0	3	1042749979	0	0
15	2019-20	2	1083042152	0	0	0	0	0	0	2	1083042152	0	0
16	2020-21	1	8021765	0	0	0	0	0	0	1	8021765	0	0
17	2021-22	1	79665295	0	0	0	0	0	0	1	79665295	0	0
18	2022-23	1	126915632	0	0	0	0	0	0	1	126915632	0	0
ಒಟ್ಟು		**27**	**3141460395**	**11**	**1761674**	**0**	**0**	**0**	**0**	**27**	**3141460395**	**11**	**1761674**

5. ಆಯ-ವ್ಯಯ:

ಕೆಟಿಸಿಪಿ ಕಾಯ್ದೆ 1961ರ ಸೆಕ್ಷನ್ 68ಬಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965ರ ನಿಯಮ 22 ರನ್ವಯ ಪ್ರತಿ ವರ್ಷದ ಜನವರಿ ಮಾಹೆಯೊಳಗಾಗಿ ಮುಂದಿನ ಸಾಲಿನ ಆಯವ್ಯಯವನ್ನು ಸಿದ್ಧಪಡಿಸಿ ಸಲ್ಲಿಸಬೇಕಾಗಿರುತ್ತದೆ. ಅದರಂತೆ ಸದರಿ ಸಾಲಿನ ಆಯವ್ಯಯವನ್ನು ದಿನಾಂಕ:19/01/2023 ರಂದು ನಡೆದ ಪ್ರಾಧಿಕಾರದ 133ನೇ ಸಭೆಯ ವಿಷಯ ಸಂಖ್ಯೆ: 133.11 ರಲ್ಲಿ ಆಯವ್ಯಯಕ್ಕೆ ಅನುಮೋದನೆ ಪಡೆದು ಪತ್ರ ಸಂಖ್ಯೆ:ಬಿಐಎಎಪಿಎ/ಬಜೆಟ್/03/2021-22/1247 ದಿನಾಂಕ: 23/03/2023 ರಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಸಲ್ಲಿಸಲಾಗಿರುತ್ತದೆ, ಮತ್ತು 2023-24ನೇ ಸಾಲಿನ ಸಭೆಯ ಅನುಮೋದಿತ ಆಯವ್ಯಯವನ್ನು ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ ಬಿಐಎಎಪಿಎ/ಆಯ-ವ್ಯಯ/03/2023-24 ದಿನಾಂಕ: 06/03/2023 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಆದರೆ, ಸರ್ಕಾರ ಮತ್ತು ಜಿಲ್ಲಾಧಿಕಾರಿಗಳಿಂದ ಸದರಿ ಸಾಲಿನ ಆಯವ್ಯಯ ಅನುಮೋದನೆಯಾಗಿರುವ ವಿವರಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ಆಯವ್ಯಯ ಅನುಮೋದನೆ ಪಡೆಯದೆ ವೆಚ್ಚ ಭರಿಸಲಾಗಿದೆ.

ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಅಂದಾಜು ಆಯವ್ಯಯದಂತೆ ನಿರೀಕ್ಷಿತ ಹಾಗೂ ಸಂಸ್ಥೆಯವರು ನೀಡಿದ ವಿವರಗಳಂತೆ ವಾಸ್ತವಿಕ ಅಂಕಿಅಂಶಗಳನ್ನು ಕೆಳಗೆ ನೀಡಲಾಗಿದೆ.

(ರೂ.ಗಳಲ್ಲಿ)

01.04.2023 ಕ್ಕೆ ಪ್ರಾರಂಭ ಶಿಲ್ಕು		**92,35,645**
2023–24 ರಲ್ಲಿ ಜಮೆ	**Ordinary section**	61,81,50,000
	Capital section	350,00,00,000
ಒಟ್ಟು		**412,73,85,645**
2023–24 ರಲ್ಲಿ ವೆಚ್ಚ	**Ordinary section**	29,86,50,000
	Capital section	381,85,00,000
31.03.2024 ಕ್ಕೆ ಆಖೈರು ಶಿಲ್ಕು		**1,02,35,645**

ಮೇಲಿನಂತೆ ನಿರೀಕ್ಷಿತ Ordinary section ಹಾಗೂ Capital sectionಗಳ ಜಮಾ ಹಾಗೂ ಖರ್ಚುಗಳ ಅಂಕಿಅಂಶಗಳನ್ನು ಗಮನಿಸಿದಾಗ ಯಾವ ಮಾನದಂಡದ ಮೇಲೆ ಆಯವ್ಯಯ ಸಿದ್ಧಪಡಿಸಲಾಗಿದೆ ಎಂಬ ವಿವರ ತಿಳಿದು ಬಂದಿರುವುದಿಲ್ಲ. ಈ ಸಂಬಂಧ ವಿವರಣೆ ನೀಡುವುದು. ಅಲ್ಲದೇ, ಇನ್ನು ಮುಂದೆ ಆಯವ್ಯಯ ಸಿದ್ಧಪಡಿಸುವಾಗ ಹಿಂದಿನ ಮೂರು ವರ್ಷಗಳ ಆದಾಯ ಮತ್ತು ವೆಚ್ಚಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಂಡು ತಯಾರಿಸಲು ಕ್ರಮ ವಹಿಸುವುದು. 2023–24ನೇ ಸಾಲಿನ ಆಯವ್ಯಯದ ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಭಾಗ–2

5. ಭೌತಿಕ ಪರಿಶೀಲನೆ

ಪ್ರಾಧಿಕಾರದ 2023–24ನೇ ಸಾಲಿನ ಲೆಕ್ಕ ಪರಿಶೋಧನೆ ಕಾರ್ಯವನ್ನು ಪ್ರಾರಂಭಿಸಿದ ದಿನದಂದು ಭೌತಿಕವಾಗಿ ಪರಿಶೀಲಿಸಿದಾಗ ವಿವಿಧ ಆಖೈರು ಶಿಲ್ಕುಗಳ ವಿವರಗಳು ಕೆಳಕಂಡಂತೆ ಕಂಡು ಬಂದಿರುತ್ತವೆ.

<table>
<tr><td>1.</td><td>ಕಛೇರಿ ಕೈನಗದು ಮೊತ್ತ</td><td>ಇರುವುದಿಲ್ಲ</td></tr>
<tr><td>2.</td><td>ಕಛೇರಿ ಅಂಚೆ ಚೀಟಿಗಳು ಮೌಲ್ಯ</td><td>ರೂ. 05 x 267= 1335/–</td></tr>
<tr><td>3.</td><td>ರಸೀದಿ ಪುಸ್ತಕಗಳು ಪುಸ್ತಕಗಳ ಕ್ರಮಾಂಕ ಸಂಖ್ಯೆ ರಸೀದಿ ಸಂಖ್ಯೆ</td><td>ರಸೀದಿ ಪುಸ್ತಕಗಳು
(264 ರಿಂದ 700)
(13,151 ರಿಂದ 35,000)</td></tr>
<tr><td>4.</td><td>FDRಹೂಡಿಕೆಗಳು ಹೂಡಿಕೆ ಮೊತ್ತ</td><td>
<table>
<tr><th>BANK</th><th>FDR NO</th><th>DATE OF INVESTMENT</th><th>DEPOSIT AMOUNT</th><th>RATE OF INTEREST</th><th>MATURITY DATE</th><th>MATURITY AMOUNT</th></tr>
<tr><td>CANARA BANK</td><td>Sl. No: 946968 A/c No 0474401003396/2</td><td>13/07/2023</td><td>30,00,00,000</td><td>7.20 %</td><td>13.07.24</td><td>322190230</td></tr>
<tr><td>STATE BANK OF INDIA</td><td>A/c No 42217819692</td><td>29/08/2023</td><td>100,00,00,000</td><td>7.70 %</td><td>29.08.24</td><td>1079252046</td></tr>
<tr><td>UNION BANK OF</td><td>Sl. No: 433614 A/c No</td><td>17/10/2023</td><td>285,00,00,000</td><td>7.48 %</td><td>18.10.24</td><td>3069863577</td></tr>
</table>
</td></tr>
</table>

		INDIA	052623030003136				
				TOTAL	415,00,00,000		4471305853
5.	ಬಡಾವಣೆ ಅರ್ಜಿಗಳು ಅರ್ಜಿಗಳ ಸಂಖ್ಯೆ	1295 ಅರ್ಜಿಗಳು ಸಂಖ್ಯೆ: 4801 ರಿಂದ 6095 ವರೆಗೆ					
6.	ಕಟ್ಟಡ ಅರ್ಜಿಗಳು ಅರ್ಜಿಗಳ ಸಂಖ್ಯೆ	300 ಅರ್ಜಿಗಳು ಸಂಖ್ಯೆ: 6200 ರಿಂದ 6500 ವರೆಗೆ					
7.	ಭೂ ಬದಲಾವಣೆ ಅರ್ಜಿಗಳು: ಅರ್ಜಿಗಳ ಸಂಖ್ಯೆ	350 ಅರ್ಜಿಗಳು ಸಂಖ್ಯೆ: 5650 ರಿಂದ 6000 ವರೆಗೆ					

7. ರಸೀದಿ ಪುಸ್ತಕಗಳ ದಾಸ್ತಾನು ವಿವರ:

2023–24ನೇ ಸಾಲಿನ ಪ್ರಾಧಿಕಾರದ ರಸೀದಿ ಪುಸ್ತಕಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಯಿತು. ಪ್ರಸಕ್ತ ಸಾಲಿನಲ್ಲಿ ಕಂಡುಬಂದ ರಸೀದಿ ಪುಸ್ತಕಗಳ ಸ್ವೀಕೃತಿ ವಿತರಣೆ ಹಾಗೂ ಅಂತಿಮ ಶಿಲ್ಕಿನ ವಿವರಗಳು ಕೆಳಕಂಡಂತೆ ಇವೆ.

1.	ದಿನಾಂಕ: 01–04–2023 ಕ್ಕೆ ಪ್ರಾರಂಭಿಕ	456
2.	2023–24 ರ ಸಾಲಿನ ಖರೀದಿ	0
3.	ಒಟ್ಟು ಪುಸ್ತಕಗಳು	456
4.	2023–24 ರ ಸಾಲಿನ ವಿತರಣೆಗಳು	19
5.	ದಿನಾಂಕ: 31–03–2024 ಕ್ಕೆ ಅಂತಿಮ	437
ಬಾಕಿ ರಸೀದಿ ಪುಸ್ತಕಗಳ ವಿವರಣೆ:– 437 ರಸೀದಿ ಪುಸ್ತಕಗಳು (264 ರಿಂದ 700)		

8. ಕಛೇರಿ ಅಂಚೆ ಚೀಟಿಗಳ ದಾಸ್ತಾನು ವಿವರ

ವಿವರ	ಮೊತ್ತ
ದಿ: 01–04–2023 ಕ್ಕೆ ಆರಂಭಿಕ	90
2023–24 ರ ಖರೀದಿ	40000
ಒಟ್ಟು	40090
2023–24 ರ ಉಪಯೋಗ	38755
ದಿ: 31–03–2024 ಕ್ಕೆ ಅಂತಿಮ	1335

9. ಪ್ರಸಕ್ತ ಸಾಲಿನಲ್ಲಿ ಉಪಯೋಗಿಸಿದ ರಸೀದಿ ಪುಸ್ತಕಗಳ ವಿವರ

2023–24ನೇ ಸಾಲಿನಲ್ಲಿ ಸಂಸ್ಥೆಯು ಈ ಕೆಳಕಂಡ ರಸೀದಿ ಪುಸ್ತಕಗಳನ್ನು ಪೂರ್ಣ ರೀತಿಯಲ್ಲಿ ಉಪಯೋಗಿಸಿರುವುದು ಕಂಡು ಬಂದಿದ್ದು ವಿವರ ಮುಂದಿನಂತಿದೆ.

ಕ್ರ.ಸಂ	ರಸೀದಿಗಳ ಸಂಖ್ಯೆ			ಷರಾ
	ಪುಸ್ತಕ.ಸಂ	ಯಿಂದ	ವರೆಗೆ	
1	244	12151	12200	ಹಿಂದಿನ ಸಾಲಿನ ಬಾಕಿ 2023–24ರಲ್ಲಿ ಪೂರ್ಣಗೊಂಡಿದೆ.
2	245	12201	12250	2023–24 ರಲ್ಲಿ ಪೂರ್ಣಗೊಂಡಿದೆ.
3	246	12251	12300	2023–24 ರಲ್ಲಿ ಪೂರ್ಣಗೊಂಡಿದೆ.
4	247	12301	12350	2023–24 ರಲ್ಲಿ ಪೂರ್ಣಗೊಂಡಿದೆ.
5	248	12351	12400	2023–24 ರಲ್ಲಿ ಪೂರ್ಣಗೊಂಡಿದೆ.
6	249	12401	12450	2023–24 ರಲ್ಲಿ ಪೂರ್ಣಗೊಂಡಿದೆ.
7	250	12451	12500	2023–24 ರಲ್ಲಿ ಪೂರ್ಣಗೊಂಡಿದೆ.
8	251	12501	12550	2023–24 ರಲ್ಲಿ ಪೂರ್ಣಗೊಂಡಿದೆ.
9	252	12551	12600	2023–24 ರಲ್ಲಿ ಪೂರ್ಣಗೊಂಡಿದೆ.
10	253	12601	12650	2023–24 ರಲ್ಲಿ ಪೂರ್ಣಗೊಂಡಿದೆ.
11	254	12651	12700	2023–24 ರಲ್ಲಿ ಪೂರ್ಣಗೊಂಡಿದೆ.
12	255	12701	12750	2023–24 ರಲ್ಲಿ ಪೂರ್ಣಗೊಂಡಿದೆ.
13	256	12751	12800	2023–24 ರಲ್ಲಿ ಪೂರ್ಣಗೊಂಡಿದೆ.
14	257	12801	12850	2023–24 ರಲ್ಲಿ ಪೂರ್ಣಗೊಂಡಿದೆ.
15	258	12851	12900	2023–24 ರಲ್ಲಿ ಪೂರ್ಣಗೊಂಡಿದೆ.
16	259	12901	12950	2023–24 ರಲ್ಲಿ ಪೂರ್ಣಗೊಂಡಿದೆ.
17	260	12951	13000	2023–24 ರಲ್ಲಿ ಪೂರ್ಣಗೊಂಡಿದೆ.
18	261	13001	13050	2023–24 ರಲ್ಲಿ ಪೂರ್ಣಗೊಂಡಿದೆ.
19	262	13051	13100	2023–24 ರಲ್ಲಿ ಪೂರ್ಣಗೊಂಡಿದೆ.
20	263	13101	13109	2023–24ರ ಭಾಗಶಃ

ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ರಸೀದಿ ಪ್ರಸಕ್ತಗಳು ಭಾಗಶಃ ಉಪಯೋಗಿಸಿದ್ದು, ಮುಂದಿನ ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ	ರಸೀದಿ ಪುಸ್ತಕ ಸಂಖ್ಯೆ		ರಸೀದಿಗಳ ಸಂಖ್ಯೆ		ಷರಾ
	ಯಿಂದ	ವರೆಗೆ	ಯಿಂದ	ವರೆಗೆ	
1.	263	–	13101	13109/30.03.2024	2023–24 ರಲ್ಲಿ ಭಾಗಶಃ

9.1 . ಮುದ್ರಿತ ರಸೀದಿ ಬಳಸಿ ಶುಲ್ಕ ವಸೂಲಿಸುತ್ತಿರುವ ಕುರಿತು:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಾಲಂ 15ಎ ರನ್ವಯ ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ ನಿಯಮ 37–ಎಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ/23/ಟಿಟಿಪಿ/2020ಎಫ್ ದಿ:21.06.2021ರಲ್ಲಿ ನಿಗಧಿಪಡಿಸಿರುವ ದರಗಳನ್ವಯ ಯೋಜನಾ ಪ್ರಾಧಿಕಾರದ ಶುಲ್ಕ ಮತ್ತು ಸೆಸ್‌ಗಳನ್ನು ಪಾವತಿಸಿಕೊಳ್ಳಬೇಕಾಗಿರುತ್ತದೆ.

2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ರಸೀದಿ ವಿವರಗಳನ್ನು ಪರಿಶೀಲಿಸಲಾಗಿ, ಪ್ರಾಧಿಕಾರದಿಂದ ನೀಡಲಾಗುವ ಸೇವೆಗಳಿಗೆ ಸಂಗ್ರಹಿಸಲಾಗುವ ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ ,ಕೆರೆ ಸಂರಕ್ಷಣಾ ಶುಲ್ಕ, ಕೊಳಚೆ ನಿರ್ಮೂಲನಾ ಉಪಕರ ಹಾಗೂ ಮಹಾನಗರ ಸಾರಿಗೆ ಉಪಕರಗಳನ್ನು ಪ್ರಸ್ತುತ ಸನ್ನಿವೇಶದಲ್ಲಿಯೂ ಸಹ ಮುದ್ರಿತ ಕೈ ರಸೀದಿ ಮೂಲಕ ಸಂಗ್ರಹಿಸಲಾಗುತ್ತಿದೆ. ಸದರಿ ರಸೀದಿ ಪುಸ್ತಕಗಳನ್ನು ನಿಯಮಾನುಸಾರ ಮುದ್ರಿಸುವುದು, ದಾಸ್ತಾನು ತೆಗೆದುಕೊಳ್ಳುವುದು ಮತ್ತು ಉಪಯೋಗಿಸಲಾದ ರಸೀದಿ ಪುಸ್ತಕಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಯೋಜನಾ ಪ್ರಾಧಿಕಾರಕ್ಕೆ ಪಾವತಿಸಬೇಕಾದ ವಿವಿಧ ಶುಲ್ಕಗಳು ಮತ್ತು ಸರ್‌ಚಾರ್ಜ್‌ಗಳನ್ನು ಡಿ ಡಿ ಮೂಲಕ ವಸೂಲಿಸಲಾಗುತ್ತಿದ್ದು, ಮಾನ್ಯುಯಲ್ ರಸೀದಿಗಳಲ್ಲಿ ಡಿಡಿ ಸಂಖ್ಯೆ,ದಿನಾಂಕ, ಬ್ಯಾಂಕ್ ಹಾಗೂ ಮೊತ್ತಗಳನ್ನು ಅಂಕಿಅಂಶಗಳಲ್ಲಿ ಮತ್ತು ಅಕ್ಷರಗಳಲ್ಲಿ ನಮೂದಿಸಬೇಕಾಗಿದ್ದು, ಮಾನವ ಸಹಜ ತಪ್ಪುಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಕಛೇರಿಯ ಜಮಾ ವಿವರಗಳನ್ನು ಬ್ಯಾಂಕ್ ಪಾಸ್ ಶೀಟ್‌ನೊಂದಿಗೆ ಲೆಕ್ಕಸಮನ್ವಯ ಮಾಡಿಕೊಂಡು ನಿಖರತೆಯನ್ನು ಖಚಿತಪಡಿಸಿಕೊಳ್ಳಲು ವಿಳಂಬವಾಗುವ ಸಂಭವವಿರುತ್ತದೆ.

ಪ್ರಸ್ತುತ; ಸರ್ಕಾರದ ಅಧೀನದಲ್ಲಿ ಇರುವ ಬಹುತೇಕ ಎಲ್ಲಾ ಇಲಾಖೆಗಳು/ನಿಗಮ ಮಂಡಳಿಗಳು/ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹಿಸುವ ವಿವಿಧ ತೆರಿಗೆ ಮತ್ತು ಶುಲ್ಕಗಳನ್ನು ಸರ್ಕಾರ ನಿಗದಿಪಡಿಸಿದ ಅಥವಾ ತಮ್ಮದೇ ಆದ ತಂತ್ರಾಂಶದ ಮೂಲಕ ವಸೂಲಿಸಲಾಗುತ್ತಿದೆ. ಯೋಜನಾ ಪ್ರಾಧಿಕಾರದ ಆರ್ಥಿಕ ವಹಿವಾಟು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ನಿಖರತೆಯನ್ನು ಕಾಯ್ದುಕೊಳ್ಳಲು ಪ್ರಾಧಿಕಾರದ ಅಗತ್ಯತೆಗೆ ಅನುಗುಣವಾಗಿ ತಂತ್ರಾಂಶವನ್ನು ಅಭಿವೃದ್ದಿಪಡಿಸಿ ಶುಲ್ಕಗಳನ್ನು ಸಂಗ್ರಹಿಸುವುದು ಅವಶ್ಯಕ ಮತ್ತು ಸಮಂಜಸವೆನಿಸುತ್ತದೆ(Need of the Hour) ಎಂದು ಲೆಕ್ಕಪರಿಶೋಧನೆ ಅಭಿಪ್ರಾಯಿಸಿದೆ.

10. ಬಡಾವಣೆ ನಕ್ಷೆ, ಕಟ್ಟಡ ನಕ್ಷೆ ಮತ್ತು ಭೂ ಉಪಯೋಗ ಅರ್ಜಿ ಫಾರಂಗಳ ದಾಸ್ತಾನು :

2023–24ನೇ ಸಾಲಿನಲ್ಲಿ ಪ್ರಾಧಿಕಾರವು ವಿತರಿಸಿರುವ ಬಡಾವಣೆ ನಕ್ಷೆ, ಕಟ್ಟಡ ನಕ್ಷೆ ಮತ್ತು ಭೂ ಬದಲಾವಣೆ/ಉಪಯೋಗ ಮಂಜೂರಾತಿ ಅರ್ಜಿಗಳಿಗೆ ಸಂಬಂಧಿಸಿದ ಫಾರಂಗಳ ದಾಸ್ತಾನು ವಿತರಣೆ ಹಾಗೂ ಬಾಕಿ ಇರುವ ವಿವರಗಳು ಈ ಕಚೇರಿಯ ದಾಸ್ತಾನು ವಹಿಯನುಸಾರ ಈ ರೀತಿ ಇದೆ.

ವಿವರ	ಬಡಾವಣೆ ನಕ್ಷೆ	ಕಟ್ಟಡ ನಕ್ಷೆ	ಭೂ ಬದಲಾವಣೆ ನಕ್ಷೆ
ದಿ: 01-04-2023 ಕ್ಕೆ ಆರಂಭಿಕ ಶಿಲ್ಕು	1582	840	1025
2023-24 ರ ಸ್ವೀಕೃತಿಗಳು	--	--	--
ಒಟ್ಟು	**1582**	**840**	**1025**
2023-24 ರ ವಿತರಣೆಗಳು	287	540	675
ದಿ: 31-03-2024 ಕ್ಕೆ ಅಂತಿಮ ಶಿಲ್ಕು	1295	300	350

11. ಬ್ಯಾಂಕ್ ಖಾತೆಗಳ ವಿವರ

ಪ್ರಾಧಿಕಾರವು ದೇವನಹಳ್ಳಿಯ ವಿಕಾಸಸೌಧ ಕಟ್ಟಡದಲ್ಲಿರುವ ಎಸ್‌ಬಿಎಂ ಬ್ಯಾಂಕ್‌ನಲ್ಲಿ ಕೆಳಕಂಡ 08 ಉಳಿತಾಯ ಖಾತೆಗಳನ್ನು ಹೊಂದಿದ್ದು, 2023-24ನೇ ಸಾಲಿನಲ್ಲಿ ನಡೆಸಿರುವ ಆರ್ಥಿಕ ವಹಿವಾಟುಗಳನ್ನು ಈ ಸದರಿ ಖಾತೆಗಳಲ್ಲಿ ನಿರ್ವಹಿಸಲಾಗಿರುತ್ತದೆ.

ಕ್ರಮ ಸಂಖ್ಯೆ	ಖಾತೆ ಹೆಸರು	ಬ್ಯಾಂಕ್	ಖಾತೆ ಸಂಖ್ಯೆ
01	ಉತ್ತಮತೆ ಶುಲ್ಕದ ಖಾತೆ	ಎಸ್‌ಬಿಐ, ದೇವನಹಳ್ಳಿ ಶಾಖೆ	54034600699
02	ಕೆರೆಗಳ ಸಂರಕ್ಷಣೆ ಖಾತೆ	ಎಸ್‌ಬಿಐ, ದೇವನಹಳ್ಳಿ ಶಾಖೆ	64015221836
03	ಭದ್ರತಾ ಠೇವಣಿ ಖಾತೆ	ಎಸ್‌ಬಿಐ, ದೇವನಹಳ್ಳಿ ಶಾಖೆ	64215138430
04	ಎಸ್.ಟಿ.ಪಿ. ಶುಲ್ಕ ಖಾತೆ	ಎಸ್‌ಬಿಐ, ದೇವನಹಳ್ಳಿ ಶಾಖೆ	64215138418
05	ನೀರು ಸರಬರಾಜು ಸೆಸ್ ಖಾತೆ	ಎಸ್‌ಬಿಐ, ದೇವನಹಳ್ಳಿ ಶಾಖೆ	39502139149
06	ಹೊರ ವರ್ತುಲ ರಸ್ತೆ ಸೆಸ್ ಖಾತೆ	ಎಸ್‌ಬಿಐ, ದೇವನಹಳ್ಳಿ ಶಾಖೆ	39502146022
07	ಕೊಳಚೆ ನಿರ್ಮೂಲ ಸೆಸ್ ಖಾತೆ	ಎಸ್‌ಬಿಐ, ದೇವನಹಳ್ಳಿ ಶಾಖೆ	39502148202
08	ಎಂ.ಆರ್.ಟಿ.ಎಸ್ ಸೆಸ್	ಎಸ್‌ಬಿಐ, ದೇವನಹಳ್ಳಿ ಶಾಖೆ	39502150403

12. ಪ್ರಾಧಿಕಾರದ ಸಮಗ್ರ ಆರ್ಥಿಕ ಪರಿಸ್ಥಿತಿ:-

ಪ್ರಾಧಿಕಾರವು ಮೇಲ್ಕಂಡ 08 ಬ್ಯಾಂಕ್ ಖಾತೆಗಳಿಂದ ಆರ್ಥಿಕ ವಹಿವಾಟನ್ನು ನಿರ್ವಹಿಸುತ್ತಿದ್ದು, 2023-24ನೇ ಸಾಲಿನ ಸಮಗ್ರ ಆರ್ಥಿಕ ಪರಿಸ್ಥಿತಿಯ ವಿವರ ಈ ಕೆಳಕಂಡಂತಿರುತ್ತದೆ.

(ರೂ.ಗಳಲ್ಲಿ)

ವಿವರಗಳು	ಮೊತ್ತ
01.04.2023 ಕ್ಕೆ ಪ್ರಾರಂಭ ಶಿಲ್ಕು	14,28,84,040
2023-24ನೇ ಸಾಲಿನಲ್ಲಿ ನಿಶ್ಚಿತ ಠೇವಣಿ ಪಕ್ವತೆಯ ಮೊತ್ತ ಜಮೆ	402,52,46,219
2023-24ನೇ ಸಾಲಿನ ಸ್ವೀಕೃತಿ	49,90,05,086
2023-24ನೇ ಸಾಲಿನಲ್ಲಿ ವರ್ಗಾವಣೆ ಮೊತ್ತ	17,38,44,834
2023-24ನೇ ಸಾಲಿನ ಬಡ್ಡಿ ಸ್ವೀಕೃತಿ	1,58,73,953
ಒಟ್ಟು ಸ್ವೀಕೃತಿ	**471,39,70,092**
ಒಟ್ಟಾರೆ(ಪ್ರಾರಂಭಿಕ ಶಿಲ್ಕು +ಒಟ್ಟು ಸ್ವೀಕೃತಿ)	485,68,54,132
2023-24ನೇ ಸಾಲಿನಲ್ಲಿ ವೆಚ್ಚ ರೂ.	5,67,79,234

2023–24ನೇ ಸಾಲಿನಲ್ಲಿ ವರ್ಗಾವಣೆ ಮೊತ್ತ	17,38,44,834
2023–24ನೇ ಸಾಲಿನಲ್ಲಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ	415,00,00,000
ಒಟ್ಟು ಪಾವತಿ	**438,06,24,068**
31.03.2024 ಕ್ಕೆ ಅಖೈರು ಶಿಲ್ಕು	47,62,30,065
31.03.2024 ಕ್ಕೆ ಬ್ಯಾಂಕ್‌ನ ಉಳಿತಾಯ ಖಾತೆಯಲ್ಲಿನ ಅಖೈರು ಶಿಲ್ಕು	47,67,15,210
ವ್ಯತ್ಯಾಸ	4,85,145

ಅನುಬಂಧ– 02 ರಲ್ಲಿ 2023–24ನೇ ಸಾಲಿನ ಸಮಗ್ರ ಆರ್ಥಿಕ ಪರಿಸ್ಥಿತಿ ವಿವರಗಳನ್ನು ಮತ್ತು ಲೆಕ್ಕ ಸಮನ್ವಯದ ವಿವರಗಳನ್ನು ವರದಿಗೆ ಲಗತ್ತಿಸಿದೆ.

13. ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ :

ಕರ್ನಾಟಕ ನಗರ ಯೋಜನಾ ಪ್ರಾಧಿಕಾರದ ಲೆಕ್ಕ ಪತ್ರಗಳ ನಿಯಮಾವಳಿ 1965ರ ನಿಯಮ 213 ರ ಪ್ರಕಾರ ಜಮೆ ಹಾಗೂ ಖರ್ಚಿನ ವರ್ಗೀಕರಣ ರಿಜಿಸ್ಟರ್ ನಿರ್ವಹಿಸಬೇಕಾಗಿದ್ದು ನಿಯಮಾನುಸಾರ ನಿಗಧಿತ ರಿಜಿಸ್ಟರ್ ನಿರ್ವಹಿಸರುವುದಿಲ್ಲ. ಲೆಕ್ಕ ತನಿಖೆಯಲ್ಲಿ ಗಮನಿಸಲಾಗಿದೆ. ಇನ್ನೂ ಮುಂದೆ ನಿಯಮಾನುಸಾರ ನಿಗಧಿತ ನಮೂನೆಯಲ್ಲಿ ರಿಜಿಸ್ಟರ್ ನಿರ್ವಹಿಸಿ ತನಿಖೆಗೆ ಹಾಜರುಪಡಿಸಲು ಸೂಚಿಸಲಾಗಿದೆ. ಯೋಜನಾ ಪ್ರಾಧಿಕಾರವು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸಿದ ನಗದು ಪುಸ್ತಕ, ಬ್ಯಾಂಕ್ ಪಾಸ್‌ಶೀಟ್‌ಗಳು, ಪೂರಕವಹಿಗಳಲ್ಲಿ ನಿರ್ವಹಿಸಿರುವ ಜಮಾ–ಖರ್ಚುಗಳನ್ನು ಆಧರಿಸಿ ಆರ್ಥಿಕ ಪರಿಸ್ಥಿತಿ ನಮೂದಿಸಿದೆ.2023–24ರ ಶೀರ್ಷಿಕೆವಾರು ಜಮಾ–ಖರ್ಚು ವಿವರಗಳನ್ನು ಅನುಬಂಧ–03 ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.

14. ವಾರ್ಷಿಕ ಲೆಕ್ಕಪತ್ರಗಳಲ್ಲಿನ ನ್ಯೂನತೆಗಳು:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಪ್ರಕರಣ 68(ಸಿ)(1) ರಂತೆ ಪ್ರತಿ ಯೋಜನಾ ಪ್ರಾಧಿಕಾರವು ಅಡಾವೆ ಪತ್ರಿಕೆಯನ್ನು ಒಳಗೊಂಡಂತೆ ವಾರ್ಷಿಕ ಲೆಕ್ಕಗಳನ್ನು ನಿರ್ದಿಷ್ಟವಾಗಿ ನಿಗಧಿಗೊಳಿಸಿರುವ ನಮೂನೆಗಳಲ್ಲಿ ಸಿದ್ಧಪಡಿಸಬೇಕಾಗಿರುತ್ತದೆ. ಸದರಿ ಪ್ರಾಧಿಕಾರದಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. 2023–24ನೇ ಸಾಲಿಗೆ ಸಂಬಂಧಿಸಿದಂತೆ ನಾಗರೀಕ ಸೌಲಭ್ಯ ನಿವೇಶನಗಳು ಹಾಗು ಇತರೆ ಆಸ್ತಿಗಳ ಆರಂಭಿಕ ಶಿಲ್ಕು ಪಟ್ಟಿ (ಓ.ಬಿ.ಸಿ) ತಯಾರಿಸಿ ಸಮತೋಲನ ಪಟ್ಟಿಯಲ್ಲಿ ಅಳವಡಿಸಿಕೊಂಡು ಸರ್ಕಾರ ನಿರ್ದಿಷ್ಟಪಡಿಸಿರುವ ಸವಕಳಿಯೊಂದಿಗೆ ಕಳೆದು ಮೌಲ್ಯವನ್ನು ನಿರ್ಧರಿಸಬೇಕಾಗಿದ್ದು, 2023–24ನೇ ಸಾಲಿಗೆ ನಿರ್ವಹಿಸಿ ಲೆಕ್ಕ ತನಿಖೆಗೆ ಸಲ್ಲಿಸಿರುವುದಿಲ್ಲ ಹಾಗೂ 2023–24ನೇ ಸಾಲಿನಲ್ಲಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿರುವ ನಾಗರೀಕ ಸೌಲಭ್ಯ ನಿವೇಶನಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಾರುಕಟ್ಟೆ ದರದನ್ವಯ ಮೊತ್ತವನ್ನು ನಮೂದಿಸಬೇಕಾಗಿದ್ದು, ಸದರಿ ವಹಿಯನ್ನು ಲೆಕ್ಕ ತನಿಖೆಗೆ ಸಲ್ಲಿಸಲಾಗಿದ್ದು, ಮಾರುಕಟ್ಟೆ ದರವನ್ನು ನಮೂದಿಸಿರುವುದಿಲ್ಲ. ಮೇಲ್ಕಂಡ ಅಂಶಗಳನ್ನೊಳಗೊಂಡಂತೆ ಹಾಗೂ ಸರ್ಕಾರದ ಆದೇಶದನ್ವಯ ಸನ್ನದು ಲೆಕ್ಕಿಗರಿಂದ ವಾರ್ಷಿಕ ಜಮಾ ಮತ್ತು ಖರ್ಚು ಸಮತೋಲನ ಪಟ್ಟಿಯನ್ನು ತಯಾರಿಸಿ ಈ ಕಛೇರಿಗೆ ರವಾನಿಸಲು ಸೂಚಿಸಿದೆ. ಯೋಜನಾ ಪ್ರಾಧಿಕಾರವು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸಿದ ನಗದುಪುಸ್ತಕ, ಬ್ಯಾಂಕ್ ಪಾಸ್‌ಶೀಟ್‌ಗಳು, ಪೂರಕವಹಿಗಳು ಮತ್ತು ಪ್ರಾಧಿಕಾರದ ಮಾಸಿಕ ಸಭೆಗಳಿಗೆ ಸಿದ್ಧಪಡಿಸಿ ಸಲ್ಲಿಸಿದ ಮಾಸಿಕ ಜಮಾ ಖರ್ಚು ತಃಖ್ತೆಗಳನ್ನು ಆಧರಿಸಿ 2023–24ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಲಾಗಿದೆ.

15. ವಾರ್ಷಿಕ ಆಡಳಿತ ವರದಿ:

ಕರ್ನಾಟಕ ಟೌನ್ ಮತ್ತು ಕಂಟ್ರಿ ಯೋಜನಾ ಆಕ್ಟ್ 1961ರ ಸೆಕ್ಷನ್ 68(ಡಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965ರ ನಿಯಮ 29ರಂತೆ ನಮೂನೆ–5 ರಲ್ಲಿ ಜಮಾ ಖರ್ಚುಗಳ ನಮೂನೆಯೊಡನೆ ವಾರ್ಷಿಕ ಆಡಳಿತ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಆಯಾ ಸಾಲಿನ ಜೂನ್ 30 ರೊಳಗಾಗಿ

ಸಲ್ಲಿಸಬೇಕಾಗಿರುತ್ತದೆ. ಅದರಂತೆ, 2023–24ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಇನ್ನೂ ಸಲ್ಲಿಸಿರುವುದಿಲ್ಲ. ವಾರ್ಷಿಕ ವರದಿಯನ್ನು ತಯಾರಿಸಿ ನಿಗಧಿತ ಅವಧಿಯೊಳಗೆ ಸರ್ಕಾರಕ್ಕೆ ಸಲ್ಲಿಸುವಂತೆ ಲೆಕ್ಕಪರಿಶೋಧನಾವರದಿ ಸೂಚಿಸಿದೆ.

16. ಹೂಡಿಕೆಗಳ ವಿವರ

ಪ್ರಾಧಿಕಾರವು ಹೂಡಿಕೆಗಳ ವಹಿಯನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. 2023–24ನೇ ಸಾಲಿನಲ್ಲಿ ಲಭ್ಯವಿದ್ದ ಹೂಡಿಕೆ ವಹಿಯನ್ನು ಹಾಗೂ ಹೂಡಿಕೆ ಪತ್ರಗಳನ್ನು ಪರಿಶೀಲಿಸಲಾಗಿ ವಿವಿಧ ಒಟ್ಟಾರೆ ಹೂಡಿಕೆ ಮೊತ್ತ ರೂ. 415,00,00,000/ ಗಳಾಗಿರುತ್ತದೆ. ಸದರಿ ಹೂಡಿಕೆಯನ್ನು E-Procurement ಮೂಲಕ ಟೆಂಡರ್ ಆಹ್ವಾನಿಸಿ ಕೆನರಾ ಬ್ಯಾಂಕ್, ದೇವನಹಳ್ಳಿ ಶಾಖೆ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ದೇವನಹಳ್ಳಿ ಶಾಖೆ, ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದೇವನಹಳ್ಳಿ ಶಾಖೆಗಳಲ್ಲಿ ಹೂಡಿಕೆ ಮಾಡಲಾಗಿದೆ. ಹಿಂದಿನ ಸಾಲಿನ ಹೂಡಿಕೆಯ ಪರಿಪಕ್ವ ಮೊತ್ತ ರೂ. 402,52,46,219/– ಗಳು ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮೆಯಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ.

2023–24ನೇ ಸಾಲಿಗೆ ಹೂಡಿಕೆ ಮಾಡಿರುವ ಮೊತ್ತ ಮತ್ತು ಸದರಿ ಠೇವಣಿಗಳಿಗೆ ಸಂಬಂಧಪಟ್ಟಂತೆ, ಬ್ಯಾಂಕ್ ವಿವರ, ಹೂಡಿಕೆ ದಿನಾಂಕ, ಪರಿಪಕ್ವತೆ ದಿನಾಂಕ, ಬಡ್ಡಿದರ, ಹಾಗೂ ಪರಿಪಕ್ವತೆ ಮೊತ್ತಗಳನ್ನೊಳಗೊಂಡ ವಿವರಗಳನ್ನು **ಅನುಬಂಧ–03** ರಲ್ಲಿ ತೋರಿಸಿದೆ, ಮತ್ತು ಸಂಬಂಧಪಟ್ಟ ಹೂಡಿಕೆಗಳಿಗೆ ಬ್ಯಾಂಕ್‌ನಿಂದ ದೃಢೀಕೃತ ಬ್ಯಾಂಕ್ ಖಾತರಿ ಪತ್ರಗಳನ್ನು ಅನುಬಂಧ–04 ರಲ್ಲಿ ವರದಿಗೆ ಲಗತ್ತಿಸಿದೆ.

ಹೂಡಿಕೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: FD 91 TAR 2022, Bangalore Dated:02.07.2022 ರಲ್ಲಿನ ಮಾರ್ಗಸೂಚಿಗಳಂತೆ ಹಾಗೂ ಹೂಡಿಕೆ ವಹಿಯನ್ನು ನಿರ್ವಹಿಸುವುದನ್ನು ಪೂರ್ಣವಾಗಿ ಪಾಲಿಸುವುದು ಎಂದು ವರದಿ ತಿಳಿಸಿದೆ.

17. ಸಂಗ್ರಹಣಾ ಶುಲ್ಕದಲ್ಲಿ ಶೇ 5%ರ ಭಾಗವನ್ನು ಶುಲ್ಕದ ರೂಪದಲ್ಲಿ ಕರ್ನಾಟಕ ನಗರ ಯೋಜನಾ ಮಂಡಳಿಗೆ ವಂತಿಕೆ ನೀಡುವುದು :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ನಿಯಮ (18)ರ ಅನ್ವಯ ಪ್ರಾಧಿಕಾರವು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಸಂಗ್ರಹಿಸಲಾದ ವಿನ್ಯಾಸ ಅನುಮೋದನೆ ಶುಲ್ಕ, ಭೂ ಉಪಯೋಗ ಬದಲಾವಣೆ ಶುಲ್ಕ, ನಿವೇಶನ/ಕಟ್ಟಡ ಅನುಮೋದನೆ ಶುಲ್ಕ, ನಿವೇಶನ ಹಾಗೂ ಕಟ್ಟಡ ನಕ್ಷೆ ತಾಂತ್ರಿಕ ಪರಿಶೀಲನಾ ಶುಲ್ಕಗಳ ಮೇಲೆ ಶೇಕಡ 5% ರಷ್ಟು ಶುಲ್ಕ ಭಾಗವನ್ನು ಕರ್ನಾಟಕ ನಗರ ಯೋಜನಾ ಮಂಡಳಿಗೆ ವಂತಿಕೆ ರೂಪದಲ್ಲಿ ನೀಡಬೇಕಾಗಿರುತ್ತದೆ. ಅದರಂತೆ, ಪ್ರಸ್ತುತ ವರ್ಷದಲ್ಲಿ(2022 ಕ್ಯಾಲೆಂಡರ್ ವರ್ಷಕ್ಕೆ) ಒಟ್ಟಾರೆ ಸ್ವೀಕೃತಿ ಮೊತ್ತ 25,63,05,782/– ಲೆಕ್ಕಾಚಾರ ಮಾಡಿ ಮೇಲಿನ ನಿಯಮದಂತೆ ಶೇ 5% ಮೊತ್ತ ರೂ. 1,28,15,289/– ಗಳನ್ನು ಡಿ.ಡಿ ಸಂಖ್ಯೆ: 454740 ದಿನಾಂಕ: 22/03/2024 ರಲ್ಲಿ ಯೋಜನಾ ಮಂಡಳಿಗೆ ಪಾವತಿಸಲಾಗಿರುತ್ತದೆ.

18. ಕೆರೆಗಳ ಪುನಶ್ಚೇತನ ಶುಲ್ಕ ವಸೂಲಿಸಿ ಸಣ್ಣ ನೀರಾವರಿ ಇಲಾಖೆಗೆ ಕೆರೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ನೀಡಿರುವ ಪ್ರಗತಿ ಕುಂಠಿತವಾಗಿರುವುದು:–

2023–24ನೇ ಸಾಲಿನಲ್ಲಿ ಈ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಅಭಿವೃದ್ಧಿ ನಕ್ಷೆಗಳ ಅನುಮೋದನೆ ನೀಡುವಾಗ ಖಾಸಗಿ ವಿನ್ಯಾಸ ಮಾಲೀಕರಿಂದ ಕೆರೆಗಳ ಪುನಶ್ಚೇತನ ಶುಲ್ಕ ಪ್ರತಿ ಎಕರೆಗೆ ರೂ.1.00 ಲಕ್ಷಗಳಂತೆ (ಒಂದು ಲಕ್ಷ ಮಾತ್ರ) ಸರ್ಕಾರದ ಆದೇಶದಂತೆ ವಸೂಲಾಗುತ್ತಿರುವುದು ಕಂಡುಬಂದಿದೆ.

2023–24ನೇ ಸಾಲಿನಲ್ಲಿ ಹಿಂದಿನ ಸಾಲಿನ ಪರಿಪಕ್ವವಾದ ಮೊತ್ತವು ಸೇರಿದಂತೆ ಈ ಕೆಳಕಂಡ ವಿವರಗಳಂತೆ ವಸೂಲಿಯಾಗಿರುತ್ತದೆ.

(ರೂ.ಗಳಲ್ಲಿ)

1	31–03–2023 ರ ಅಂತ್ಯಕ್ಕೆ ಒಟ್ಟು ರೂ.	113,40,04,375
2	2023–24 ರ ಪ್ರಸ್ತುತ ಸಾಲಿನಲ್ಲಿ ವಸೂಲಿಸಲಾದ ಕೆರೆ ಪುನಶ್ಚೇತನ ಶುಲ್ಕ ರೂ.	4,77,56,990
3	**ಒಟ್ಟು ಮೊತ್ತ**	**118,17,61,365**
4	2023–24 ರಲ್ಲಿ ಉಪಯೋಗಿಸಿದ ಮೊತ್ತ	48,24,182
5	ಬಳಕೆಯಾಗದೇ ಬಾಕಿ ಉಳಿದ ಕೆರೆ ಪುನಶ್ಚೇತನ ಶುಲ್ಕ	117,69,37,183

ಸರ್ಕಾರದ ಸೂಚನೆ/ಆದೇಶದಂತೆ ಸ್ವೀಕರಿಸಿದ ಕೆರೆ ಪುನಶ್ಚೇತನ ಮೊತ್ತಕ್ಕೆ 2023–24 ನೇ ಸಾಲಿನಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಗೆ ಒಳಪಡುವ ಶ್ಯಾನುಬೋಗನಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ರೂ. 48,24,182/– ವೆಚ್ಚ ಭರಿಸಿರುವುದು ಕಂಡುಬಂದಿರುತ್ತದೆ ಉಳಿದ ಹೆಚ್ಚುವರಿ ಮೊತ್ತಕ್ಕೆ ಸೂಕ್ತ ಯೋಜನೆ ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಸೂಕ್ತವಾಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ಸ್ವೀಕರಿಸಿರುವ ರೂ. 4,77,56,990/– ಗಳಲ್ಲಿ ರೂ. 48,24,182/– ಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಂಡಿರುತ್ತಾರೆ ಹಾಗೂ ಉಳಿದ ಮೊತ್ತ ರೂ. 4,29,32,808/– ಗೆ ಯಾವುದೇ ವೆಚ್ಚಗಳನ್ನು ಕೂಡ ಕೈಗೊಂಡಿರುವುದಿಲ್ಲ. , ಸದರಿ ವರ್ಷದಲ್ಲಿ ಯಾವುದೇ ಹಣವನ್ನು ಕೆರೆಗಳ ಅಭಿವೃದ್ಧಿಗಾಗಿ ಸಣ್ಣ ನೀರಾವರಿ ಇಲಾಖೆಗೆ ಬಿಡುಗಡೆ ಮಾಡಿರುವುದು ಕಂಡುಬಂದಿರುವುದಿಲ್ಲ, ಇದರ ಬಗ್ಗೆ ಆಡಳಿತ ಮಂಡಳಿಯು ಸೂಕ್ತ ಕ್ರಮವಹಿಸಲು ವರದಿ ತಿಳಿಸಿದೆ.

19. ನಾಗರೀಕ ಸೌಲಭ್ಯ (ಸಿ.ಎ.) ನಿವೇಶನಗಳ ವಿವರ.

ಯೋಜನಾ ಪ್ರಾಧಿಕಾರ ವ್ಯಾಪ್ತಿಗೆ ಒಳಪಟ್ಟಂತೆ ಅನುಮೋದನೆಗೊಂಡ ಬಡಾವಣೆಗಳಲ್ಲಿ 2023–24 ನೇ ಸಾಲಿನಲ್ಲಿ ಎಷ್ಟು ಸಿ.ಎ. ಸೈಟುಗಳನ್ನು ಸುಪರ್ದಿಗೆ ಪಡೆಯಲಾಗಿದೆ ಎಂಬುದರ ಬಗ್ಗೆ ಪರಿಶೀಲಿಸಲಾಗಿ ಈ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಂತೆ ಅನುಮೋದನೆಗೊಂಡ ಬಡಾವಣೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಾಧಿಕಾರಕ್ಕೆ ಪರಿತ್ಯಾಜನೆ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳಲಾಗಿರುವ ಸಿ.ಎ. ಸೈಟುಗಳ ವಿವರಗಳನ್ನು ಸಲ್ಲಿಸಿದ್ದು **ಒಟ್ಟು 13 ಎಕರೆ 0.21 ಗುಂಟೆ** ಇರುವುದು ಕಂಡುಬಂದಿರುತ್ತದೆ, ವಿವರವನ್ನು **ಅನುಬಂಧ–05**ರಲ್ಲಿ ಲಗತ್ತಿಸಿದೆ. ಈ ಬಗ್ಗೆ ಪರಿಶೀಲಿಸಲಾಗಿ ಪ್ರಾಧಿಕಾರದ ಯೋಜನಾ ವ್ಯಾಪ್ತಿಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ವಿನ್ಯಾಸ ಅನುಮೋದನೆ ಪಡೆದು ನಾಗರೀಕ ಸೌಲಭ್ಯದ ನಿವೇಶನಗಳನ್ನ ಸುಪರ್ದಿಗೆ ಪಡೆದುಕೊಂಡು ಪರಿತ್ಯಾಜನಾ ಪತ್ರದ ಮುಖಾಂತರ ಪಡೆದು ಸಬ್‌ರಿಜಿಸ್ಟ್ರಾರ್ ಕಛೇರಿಯಿಂದ ನೊಂದಾಯಿಸಿಕೊಂಡು ಕಛೇರಿಯ ಹೆಸರಿನಲ್ಲಿ ನಾಮಫಲಕ ಅಳವಡಿಸಿಕೊಂಡು ಸಿ.ಎ. ಸೈಟುಗಳನ್ನು ಸಂರಕ್ಷಿಸಿಕೊಂಡು ಉಪಯೋಗಕ್ಕೆ ಪಡೆಯುವುದು ಸೂಕ್ತವಾಗಿರುತ್ತದೆ ಎಂದು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದೆ ಹಾಗೂ ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ ನಅಇ 143 ಬೆಂರೂಪ್ರಾ 2013 ದಿನಾಂಕ: 05.08.2013 ರ ಆದೇಶವನ್ನ ಪಾಲಿಸುವುದು ಅವಶ್ಯಕವಾಗಿರುತ್ತದೆ. ರಾಜ್ಯಪಾಲರ ಆದೇಶದಂತೆ ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಬಂಧಿಸಿದೆ ಇಲಾಖೆಗಳಿಗೆ ಹಂಚಿಕೆಯಾದ ನಂತರ ಸದರಿ ನಿವೇಶನ ಮೌಲ್ಯವನ್ನು ನಿರ್ಧರಿಸಲಾಗುವುದು.

20. ಅನಧಿಕೃತ ನಿರ್ಮಾಣಗಳು ಹಾಗೂ ಅನಧಿಕೃತ ಬಡಾವಣೆಗಳ ನಿರ್ಮಾಣಗಳ ತಡೆಗಾಗಿ/ತೆರವುಗಳಿಸಲು ಪ್ರಾಧಿಕಾರ ಕೈಗೊಂಡಿರುವ ಕ್ರಮದ ಕುರಿತು:–

2023–24ನೇ ಸಾಲಿನವರೆಗೆ ಸದರಿ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961ರಂತೆ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಾಯ್ದೆಯಂತೆ ಭೂಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ನೀಡುವುದು, ವಿನ್ಯಾಸ ಅನುಮೋದನೆ ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣಪತ್ರ ನೀಡುವುದಲ್ಲದೆ ಅನಧಿಕೃತ ಬಡಾವಣೆಗಳು ಹಾಗೂ ಅನಧಿಕೃತ ನಿರ್ಮಾಣಗಳ ತಡೆಗಾಗಿ ಕ್ರಮ ಕೈಗೊಳ್ಳುವುದು ಪ್ರಾಧಿಕಾರದ ಜವಬ್ದಾರಿಯಾಗಿರುತ್ತದೆ. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ನಿಯಮಾನುಸಾರ ಪೂರ್ಣ ದಾಖಲೆಗಳೊಂದಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಹಾಗೂ ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ವಲಯ ನಿಯಮಾವಳಿಗಳು ಮತ್ತು ಕಟ್ಟಡ ವಿಧಿಗಳ ನಿಬಂಧನೆಗಳನ್ನು ಉಲ್ಲಂಘನೆ ಮಾಡಿ ಬಡಾವಣೆ ಮತ್ತು ಕಟ್ಟಡ ನಿರ್ಮಾಣ ಮಾಡಿರುವ ಪ್ರಕರಣಗಳ ವಿರುದ್ಧ ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಗೆ ವಿವರಗಳನ್ನು ಒದಗಿಸಿರುವುದಿಲ್ಲ. ಯೋಜನಾ ಪ್ರಾಧಿಕಾರದಿಂದ ನೀಡಲಾಗುವ ವಸತಿ ವಿನ್ಯಾಸ ನಕ್ಷೆ, ಅಭಿವೃದ್ಧಿ ಯೋಜನಾ ನಕ್ಷೆ ಮತ್ತು ಕಟ್ಟಡ ನಕ್ಷೆ ಮಂಜೂರಾತಿ ಪತ್ರದಲ್ಲಿ ವಿಧಿಸಲಾಗುವ ಷರತ್ತು ಮತ್ತು ನಿಬಂಧನೆಗಳಿಗನುಗುಣವಾಗಿ ಲೇಔಟ್ ಮತ್ತು ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಪರಿಶೀಲಿಸಿ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ವಿಧಿಸುವ ಅಥವಾ ಯೋಜನಾ ಪ್ರಾಧಿಕಾರಗಳು ನೀಡಿರುವ ಅನುಮೋದನೆಯನ್ನು ರದ್ದುಪಡಿಸಿರುವ ಅಧಿಕಾರದಂತೆ ಕ್ರಮವಹಿಸಬಹುದಾಗಿರುತ್ತದೆ. ಅನಧಿಕೃತ ನಿರ್ಮಾಣಗಳು ಹಾಗೂ ಅನಧಿಕೃತ ಬಡಾವಣೆಗಳ ನಿರ್ಮಾಣಗಳ ತಡೆಗಾಗಿ/ತೆರವುಗಳಿಸುವ ಸಂಬಂಧ ಪರಿಶೀಲನೆ/ಮೇಲುಸ್ತುವಾರಿ ವಹಿಸಲು ಪ್ರಾಧಿಕಾರದಲ್ಲಿ ಸಿಬ್ಬಂದಿ ಕೊರತೆ ಇರುವುದಾಗಿ ಲೆಕ್ಕಪರಿಶೋಧನೆಗೆ ತಿಳಿಸಲಾಗಿರುತ್ತದೆ, ಈ ಕುರಿತು ನಗರ ಯೋಜನಾ ಇಲಾಖೆಯ ಆಡಳಿತಾತ್ಮಕ ಶಾಖೆಯೊಂದಿಗೆ ಚರ್ಚಿಸಿ ಪ್ರಾಧಿಕಾರಕ್ಕೆ ಹೆಚ್ಚಿನ ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಕ್ರಮವಹಿಸುವುದು ಸಮಂಜಸವೆಂದು ಲೆಕ್ಕಪರಿಶೋಧನೆ ಅಭಿಪ್ರಾಯಪಡುತ್ತದೆ.

21. ಉದ್ಯಾನಗಳ ಹಾಗೂ ತೆರೆದ ಜಾಗದ ವಿವರ :–

ಮಹಾಯೋಜನೆ BIAAPAದ (Master plan) ನಲ್ಲಿ ಸೂಚಿಸಿರುವಂತೆ ಪ್ರಾಧಿಕಾರದ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಉದ್ಯಾನಗಳು ಮತ್ತು ತೆರೆದ ಜಾಗ (Park and open space) ನಿಗದಿಪಡಿಸಿರುವ ಬಗ್ಗೆ ಮಾಹಿತಿ ಲಭ್ಯವಿರುತ್ತದೆ. ಈ ಸಂಬಂಧ ಯೋಜನಾ ಪ್ರಾಧಿಕಾರದಿಂದ 2023–24ನೇ ಸಾಲಿನಲ್ಲಿ ಅನುಮೋದಿಸಿದ ವಿವಿಧ ಬಡಾವಣೆಗಳ ನಕ್ಷೆ ಮಂಜೂರಾತಿ, ನೀಡಿ ನಾಗರೀಕ ಸೌಲಭ್ಯ ನಿವೇಶನಗಳನ್ನು ಮಾತ್ರ ಪ್ರಾಧಿಕಾರದವರು ಪಡೆದಿರುತ್ತಾರೆ. ಉದ್ಯಾನಗಳ ಜಾಗವನ್ನು ಬಡಾವಣೆ ನಕ್ಷೆ ಮಂಜೂರಾದ ಕೂಡಲೆ ಸ್ಥಳೀಯ ಪ್ರಾಧಿಕಾರಗಳ ಸುಪರ್ದಿಗೆ ವಹಿಸಲಾಗಿರುವುದೆಂಬ ಮಾಹಿತಿಯನ್ನು ನೀಡಿರುತ್ತಾರೆ. ಆದರೆ ಉದ್ಯಾನವನ ಮತ್ತು ತೆರೆದ ಜಾಗಗಳನ್ನು ಯಾವ ಯಾವ ಸ್ಥಳೀಯ ಪ್ರಾಧಿಕಾರಗಳಿಗೆ ವಹಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಿರುವುದಿಲ್ಲ.

22. ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳ ಹಂಚಿಕೆ:–

ಅನುಮೋದನೆಗೊಂಡ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯ ಉದ್ದೇಶಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ಹಂಚಿಕೆ ಮಾಡಲು ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ:UDD/27/TTP/2016, ದಿನಾಂಕ:24.05.2017ರಂತೆ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಾಗರೀಕ ಸೌಕರ್ಯ ನಿವೇಶನ ಹಂಚಿಕೆ ನಿಯಮಗಳು–2016 ಅನ್ನು ಅಧಿಸೂಚಿಸಲಾಗಿರುತ್ತದೆ. ಸದರಿ ನಿಯಮಾವಳಿಯಂತೆ ಮೊದಲನೇ ಮತ್ತು ಎರಡನೇ ಆಧ್ಯತೆ ಇರುವ ಸರ್ಕಾರದ ಸಂಸ್ಥೆಗಳಿಗೆ ಹಂಚುವ ಕ್ರಮ ಕೈಗೊಳ್ಳಲಾಗುತ್ತಿದೆ. ದಿನಪತ್ರಿಕೆಗಳಲ್ಲಿ ಅರ್ಜಿಗಳನ್ನು

ಆಹ್ವಾನಿಸಿ, ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಹಂಚುವ ಕ್ರಮ ಕೈಗೊಳ್ಳಲಾಗುತ್ತಿರುವುದಾಗಿ ತಿಳಿಸಿರುತ್ತಾರೆ.

23. ಭೂ ಉಪಯೋಗ ಬದಲಾವಣೆ ಪ್ರಕರಣಗಳು :–

ಸರ್ಕಾರದ ಭೂ ಉಪಯೋಗ ಬದಲಾವಣೆ ಮಾರ್ಗಸೂಚಿ ಸಂಖ್ಯೆ: ಯುಡಿಡಿ165/ಬಿ.ಎಂ.ಆರ್ 2012 ಬೆಂಗಳೂರು ದಿನಾಂಕ: 12.10.2012ರಂತೆ ಭೂಮಾಲೀಕರು, ಮಹಾಯೋಜನಾ ನಕ್ಷೆಯಲ್ಲಿರುವ ನಿಗಧಿತ ಭೂ ಉಪಯೋಗದ ಬದಲಿಗೆ ಹೊಸದಾಗಿ ಬೇರೆ ಉದ್ದೇಶಕ್ಕಾಗಿ ಜಮೀನನ್ನು ಅಭಿವೃದ್ಧಿಪಡಿಸಲು ಆಪೇಕ್ಷಿಸಿದ್ದಲ್ಲಿ, BIAPPA ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ಅಗತ್ಯ ದಾಖಲಾತಿಗಳೊಂದಿಗೆ ಭೂ ಉಪಯೋಗ ಬದಲಾವಣೆ ಅರ್ಜಿಯನ್ನು ಸಲ್ಲಿಸಲಾಗುತ್ತಿದೆ. ದಾಖಲಾತಿಗಳೊಂದಿಗೆ ಸರ್ಕಾರದ ಜಾರಿಗೊಳಿಸಲಾದ ಮಾರ್ಗದರ್ಶನದ ಅನ್ವಯ, ಬದಲಾವಣೆ ಬಯಸುವ ಯೋಜನೆ ಸಿದ್ಧಾಂತದನ್ವಯ ಯೋಗ್ಯ ಎಂದು ಭಾವಿಸಿದ್ದಲ್ಲಿ ಮತ್ತು ಅದರಲ್ಲಿ ಸಾರ್ವಜನಿಕ ಹಿತಾಸಕ್ತಿ ಇದ್ದು, ಯಾವುದೇ ನಿಯಮಗಳ ವಿರುದ್ಧ ಇಲ್ಲದಿದ್ದ ಪಕ್ಷದಲ್ಲಿ, ಸ್ಥಳೀಯ ಪತ್ರಿಕೆಯಲ್ಲಿ ಈ ಕುರಿತು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಣೆ ಹೊರಡಿಸಿ, ಕನಿಷ್ಟ 15 ದಿನಗಳ ಕಾಲಾವಕಾಶ ನೀಡಿ, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುತ್ತದೆ.

ಸಾರ್ವಜನಿಕರಿಂದ ಆಕ್ಷೇಪಣೆಗಳು ಸ್ವೀಕೃತವಾದ್ದಲ್ಲಿ, ಅವುಗಳನ್ನು ಪರಿಶೀಲಿಸಿ ಭೂ ಉಪಯೋಗ ಬದಲಾವಣೆಗಳ ಕುರಿತು ಪ್ರಾಧಿಕಾರದ ಸಭೆಯಲ್ಲಿ ವಿಮರ್ಶಿಸಿ, ತರಾವನ್ನು ನಿರ್ಣಯಿಸಿ, ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ/ಮಾಡದೇ ಇರುವ ಬಗ್ಗೆ ಸೂಕ್ತ ಕಾರಣದೊಂದಿಗೆ ನಿರ್ಣಯಿಸಲಾಗುತ್ತದೆ. ಪ್ರಾಧಿಕಾರದ ಸಭೆಯಲ್ಲಿ ಭೂಉಪಯೋಗ ಬದಲಾವಣೆ ಶಿಫಾರಸ್ಸು/ನಿರ್ಣಯದ ಮೂಲಕ ಪ್ರಕರಣಗಳನ್ನು ಸರ್ಕಾರದ ಮಂಜೂರಾತಿಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

ಪ್ರಸ್ತುತ ಸಾಲಿನಲ್ಲಿ ಒಟ್ಟು 365 ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳಿಗೆ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಪ್ರಸ್ತುತ ಸಾಲಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 69(2)ರನ್ವಯ ಒಟ್ಟು 365 ಭೂ ಉಪಯೋಗ ನಿಗಧಿ ಪ್ರಕರಣಗಳಿಗೆ ಪ್ರಾಧಿಕಾರದಿಂದ ಅನುಮೋದನೆ ನೀಡಿ ಬಿ.ಎಂ.ಆರ್.ಡಿ.ಎ ಸಂಸ್ಥೆಗೆ ಸಲ್ಲಿಸಿರುವುದು ಕಂಡುಬಂದಿರುತ್ತದೆ.

24. ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಠ 5 ವರ್ಷ ಮುಗಿದಿದ್ದರೂ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ವಿವರ :–

2023–24ನೇ ಸಾಲಿಗೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಠ 5 ವರ್ಷ ಮುಗಿದಿದ್ದರೂ ಸಹ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ.01/2023–24 ದಿನಾಂಕ:18.04.2024ರಂದು ನೀಡಿದ್ದು, ಈ ಸಂಬಂಧ ಪ್ರಸಕ್ತ ಸಾಲಿನಲ್ಲಿ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಈ ಸಂಬಂಧ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. 2005 ರಿಂದ 2015ನೇ ಸಾಲಿನವರೆಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುವ ಖಾಸಗಿ ಬಡಾವಣೆಗಳಲ್ಲಿನ ನಿವೇಶನಗಳ ಬಿಡುಗಡೆ ಕುರಿತು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ.ಪ್ರಸ್ತುತ ಸರ್ಕಾರವು ಕರ್ನಾಡಟಕ ನಗರ ಮತ್ತು ಗ್ರಾಮಾಂತರ ನಗರ ಯೋಜನಾ ಕಾಯ್ದೆ 1961ರ ಕಲಂ71(ಕೆ) ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 2005 ರಿಂದ 2015ನೇ ಸಾಲಿನವರೆಗೆ ನಕ್ಷೆ ಮಂಜೂರಾತಿ ಪಡೆದು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸದೇ ಇರುವ ಪ್ರಕರಣಗಳಲ್ಲಿ

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ60ಮೈಅಪ್ರಾ2018,ದಿನಾಂಕ:12.11.2018ರನ್ವಯ ಈ ಕೆಳಕಂಡಂತೆ ಕ್ರಮವಹಿಸಲು ಆದೇಶಿಸಲಾಗಿರುತ್ತದೆ.

1. 2005ನೇ ಸಾಲಿನಿಂದ 2015ನೇ ಸಾಲಿನ ಅವಧಿಯಲ್ಲಿ ಅನುಮೋದನೆಗೊಂಡಿರುವ ವಿನ್ಯಾಸಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸದೇ ಇರುವಂತಹ ಪ್ರಕರಣಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯಲ್ಲಿ ಅನುಮೋದಿತ ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಿ ಬಾಕಿ ಇರುವ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿ ಬರುವ ಪ್ರಸ್ತಾವನೆಗಳಿಗೆ ಯಾವುದೇ ದಂಡ ಶುಲ್ಕವಿಲ್ಲದೆ ಬಿಡುಗಡೆಗೊಳಿಸತಕ್ಕದ್ದು.
2. ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿ ಮೀರಿದ ನಂತರ ಅನುಮೋದಿತ ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಿ ನಿವೇಶನ ಬಿಡುಗಡೆ ಕೋರಿ ಬರುವಂತಹ ಪ್ರಸ್ತಾವನೆಗಳಲ್ಲಿ ಬಿಡುಗಡೆ ಬಾಕಿ ಇರುವ ನಿವೇಶನಗಳ ಮಾರ್ಗಸೂಚಿ ಬೆಲೆಯ ಮೇಲೆ ಪ್ರತಿ ವರ್ಷಕ್ಕೆ ಶೇ.3 ರಷ್ಟು ಮೊತ್ತವನ್ನು ದಂಡದ ರೂಪದಲ್ಲಿ ಸಂಬಂಧಿಸಿದ ಯೋಜನಾ ಪ್ರಾಧಿಕಾರಗಳು ಪಾವತಿಸಿಕೊಂಡು ಉಳಿಕೆ ನಿವೇಶನಗಳನ್ನು ಬಿಡುಗಡೆಗೊಳಿಸತಕ್ಕದ್ದು.
3. ಈ ಅಧಿಸೂಚನೆಯಲ್ಲಿ ಅಂಶಗಳು ದಿನಾಂಕ:26-05-2005 ರಿಂದ ದಿನಾಂಕ:10-09-2015ರವರೆಗೆ ಅನುಮೋದಿಸಲಾಗಿರುವ ಖಾಸಗಿ ವಿನ್ಯಾಸಗಳಿಗೆ ಮಾತ್ರ ಅನ್ವಯವಾಗಲಿದ್ದು , ದಿನಾಂಕ:10-09-2015ರ ನಂತರದಲ್ಲಿ ದಿನಾಂಕ:10-09-2015ರ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ24ಶಾಸನ 2015 ರನ್ವಯ ಕಟ್ಟುನಿಟ್ಟಾಗಿ ಕ್ರಮಕೈಗೊಳ್ಳತಕ್ಕದ್ದು ಎಂಬ ವಿಷಯದ ಬಗ್ಗೆ ಸಾರ್ವಜನಿಕರು/ವಿನ್ಯಾಸ ಮಾಲಿಕರು/ನಿವೇಶನ ಅಭಿವೃದ್ಧಿದಾರರು/ನಿವೇಶನ ಖರೀದಿದಾರರ ತಿಳುವಳಿಕೆ ಹಾಗೂ ಮಾಹಿತಿಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ. ಅದರನ್ವಯ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಠ 5 ವರ್ಷ ಮುಗಿದಿದ್ದರೂ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಿ ಸೂಕ್ತ ಕ್ರಮವಹಿಸಲಾಗಿರುವುದನ್ನು ಗಮನಿಸಿದೆ.

25. ಸೆಸ್ & ಸರ್‌ಚಾರ್ಜ್:-

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಾಲಂ 18ಎ ರನ್ವಯ ಹಾಗೂ ಈ ಕೆಳಕಂಡ ಉದ್ದೇಶಗಳಿಗೆ ಸೆಸ್‌ಅನ್ನು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ ನಿಯಮ37-ಸಿ ರಡಿ ಅಧಿಸೂಚನೆ ಸಂಖ್ಯೆ: ಯುಡಿಡಿ/23/ಟಿಟಿಪಿ/2020 ದಿನಾಂಕ: 21.06.2021ರಲ್ಲಿ ನಿಗಧಿಪಡಿಸಿರುವ ದರಗಳಂತೆ ಪಾವತಿಸಿಕೊಳ್ಳಲಾಗಿರುತ್ತದೆ ವಸೂಲಾತಿ ವಿವರಣೆ ಈ ಕೆಳಗಿನಂತಿವೆ.

(ರೂ.ಗಳಲ್ಲಿ)

ಕ್ರಸ	ಸೆಸ್ಸುಗಳ ವಿವರಣೆ	ದಿನಾಂಕ: 01/04/2023 ಕ್ಕೆ ಪ್ರಾರಂಭಿಕ ಶಿಲ್ಕು	2023-24 ನೇ ಸಾಲಿನಲ್ಲಿ ವಸೂಲಿಸಿರುವ ಮೊತ್ತ	ಶೇ.5 ರಂತೆ ಸಂಗ್ರಹಣ ಶುಲ್ಕ	ಪ್ರಸಕ್ತ ಸಾಲಿನಲ್ಲಿ ಪಾವತಿಸ ಬೇಕಾಗಿರುವ ಮೊತ್ತ	ದಿನಾಂಕ: 31/03/2024 ಕ್ಕೆ ಬಾಕಿ
1	ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿ	2,90,77,710	1,48,48,730	7,42,437	1,41,06,293	4,31,84,003
2	ವರ್ತುಲ ರಸ್ತೆ ಅಭಿವೃದ್ಧಿ	2,92,25,691	1,48,48,730	7,42,437	1,41,06,293	4,31,31,984
3	ಕೊಳಚೆ ಪ್ರದೇಶಗಳ ಅಭಿವೃದ್ಧಿ	1,45,68,208	74,25,260	3,71,263	70,53,997	2,16,22,205
4	ಸಮೂಹ ಸಾರಿಗೆ ವ್ಯವಸ್ಥೆ ಅಭಿವೃದ್ಧಿ	13,37,09,318	5,56,11,430	27,80,571	5,28,30,859	18,65,40,177
ಒಟ್ಟು		**20,65,80,927**	**9,27,34,150**	**46,36,708**	**8,80,97,442**	**29,44,78,369**

ಪ್ರಸಕ್ತ ವರ್ಷದಲ್ಲಿ ವಸೂಲಿಸಿದ ಮೊತ್ತ ರೂ 9,27,34,150/- ಗಳಲ್ಲಿ ಶೇಕಡಾ 5% ಸಂಗ್ರಹಣಾ ಶುಲ್ಕ ಮೊತ್ತ ರೂ. 46,36,708/- ಗಳನ್ನು ಹೊರತುಪಡಿಸಿ ಬಾಕಿ ಮೊತ್ತ ರೂ.8,80,97,442/- ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ವಿವರಣೆ ಸಲ್ಲಿಸುವವರೆಗು ರೂ. 8,80,97,442/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಮುಂದುವರೆದು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವತಿಯಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/23/ಟಿಟಿಪಿ/2020 ದಿನಾಂಕ: 21.06.2021ರ ತಿದ್ದುಪಡಿ ನಿಯಮ 37–ಸಿ(2)ರಲ್ಲಿ ವಸೂಲಿಸಲಾದ ಸೆಸ್ ಮತ್ತು ಸರ್ ಚಾರ್ಜ್ ಮೊತ್ತವನ್ನು ಪ್ರತ್ಯೇಕ ಖಾತೆಯಲ್ಲಿ ಸಂಗ್ರಹಿಸಿಡುವಂತೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಸದರಿ ಮೊತ್ತವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿರುವುದು ಕಂಡುಬಂದಿರುತ್ತದೆ. ಹಾಗೂ ತಿದ್ದುಪಡಿ ನಿಯಮ 37–ಸಿ(3)ರಲ್ಲಿ ತಿಳಿಸಿರುವಂತೆ ಸದರಿ ಸೆಸ್ ಮತ್ತು ಸರ್‌ಚಾರ್ಜ ಒಟ್ಟು ಮೊತ್ತದಲ್ಲಿ ಶೇಕಡಾ 5% ರಷ್ಟು ಸೇವಾಶುಲ್ಕವನ್ನು ಸಂಗ್ರಹಣಾ ಪ್ರಾಧಿಕಾರ ತಮ್ಮಲ್ಲಿಯೇ ಉಳಿಸಿಕೊಂಡು ಕಾಲಕಾಲಕ್ಕೆ ಸರ್ಕಾರ ನೀಡುವ ನಿರ್ದೇಶನದಂತೆ ಜಮೆ ಮಾಡಲು ತಿಳಿಸಲಾಗಿರುತ್ತದೆ. ಈ ಕುರಿತು ಲೆಕ್ಕಪರಿಶೋಧನೆಯಲ್ಲಿ ವಿಚಾರಿಸಲಾಗಿ ಪ್ರಾಧಿಕಾರದಿಂದ ದಿನಾಂಕ:31.03.2024ರ ವರೆಗೆ ಸ್ವೀಕೃತಿಯಾಗಿರುವ ಒಟ್ಟು ಸೆಸ್ ಮತ್ತು ಸರ್ ಚಾರ್ಜ ಮೊತ್ತ ರೂ.294478369/–ಗಳಾಗಿದ್ದು ಅದನ್ನು ಯಾವ ಲೆಕ್ಕ ಶಿರ್ಷಿಕೆಗೆ ಜಮಾ ಮಾಡಬೇಕೆಂಬ ಬಗ್ಗೆ ನಗರ ಯೋಜನೆ ಇಲಾಖೆ/ಸರ್ಕಾರದಿಂದ ಯಾವುದೇ ಸ್ಪಷ್ಟ ನಿರ್ದೇಶನ ಪ್ರಾಧಿಕಾರಕ್ಕೆ ಇಲ್ಲದಿರುವ ಪ್ರಯುಕ್ತ ಈವರೆವಿಗೂ ಸದರಿ ಮೊತ್ತವನ್ನು ಬ್ಯಾಂಕ್ ಖಾತೆಯಲ್ಲಿಯೇ ಉಳಿಸಿಕೊಳ್ಳಲಾಗಿದೆ ಎಂಬುದಾಗಿ ಲೆಕ್ಕಪರಿಶೋಧನೆಗೆ ವಿವರಣೆ ನೀಡಲಾಗಿರುತ್ತದೆ. ಈ ಕುರಿತು ನಗರ ಯೋಜನೆ ಇಲಾಖೆ ಮೂಲಕ ಸರ್ಕಾರಕ್ಕೆ ಪತ್ರ ವ್ಯವಹಾರ ನಡೆಸಿ, ಸರ್ಕಾರದ ನಿರ್ದೇಶನ ಪಡೆದು ಸೆಸ್ ಮತ್ತು ಸರ್ ಚಾರ್ಜ್ ಮೊತ್ತಗಳನ್ನು ಜಮೆ ಮಾಡುವ ಬಗ್ಗೆ ಸೂಕ್ತ ಕ್ರಮ ವಹಿಸುವುದು ಅವಶ್ಯಕವಾಗಿರುತ್ತದೆ ಎಂದು ಲೆಕ್ಕಪರಿಶೋಧನೆಯ ಅಭಿಪ್ರಾಯಿಸಿದೆ.

26. ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಕೋರಿರುವ ಬಗ್ಗೆ:–

2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕಾಗಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಿರುವ ವಿವರಗಳನ್ನು ಪರಿಶೀಲಿಸಲಾಗಿರುತ್ತದೆ. 2023–24ನೇ ಸಾಲಿನಲ್ಲಿ ಒಟ್ಟಾರೆ 175 ಕಟ್ಟಡ ನಿರ್ಮಾಣ ಮಾಡಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಕೋರಲಾಗಿದ್ದು, ಎಲ್ಲಾ ಕಟ್ಟಡಗಳ ನಿರ್ಮಾಣಗಳಿಗೆ ನಿಯಮಾನುಸಾರ ಶುಲ್ಕ ಪಾವತಿಸಿಕೊಂಡು ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರುಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧ–06ರಲ್ಲಿ ಲಗತ್ತಿಸಿದೆ.

27. ಪ್ರಾಧಿಕಾರದಿಂದ ನಕ್ಷೆ ಮಂಜೂರಾತಿಗಾಗಿ ತಾತ್ಕಾಲಿಕ ಅನುಮೋದನೆ ನೀಡಿರುವ ಬಗ್ಗೆ:–

2023–24ನೇ ಸಾಲಿನ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ17(2ಎ)ರಡಿಯಲ್ಲಿ ಒಟ್ಟು 32 ಪ್ರಸ್ತಾವನೆಗಳಿಗೆ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. ವಿವರಗಳನ್ನು ಅನುಬಂಧ–07ರಲ್ಲಿ ಲಗತ್ತಿಸಿದೆ.

28. ಯೋಜನಾ ಪ್ರಾಧಿಕಾರದ "ಮಹಾಯೋಜನೆ 2021" ಅವಧಿ ಮುಗಿದಿರುವ ಬಗ್ಗೆ:–

BIAAPAದ ಮಹಾಯೋಜನೆ (Master plan) ನ ಅವಧಿಯೂ ಡಿಸೆಂಬರ್–2021ಕ್ಕೆ ಅಂತ್ಯಗೊಂಡಿರುತ್ತದೆ. BIAAPA ದ 'ಪರಿಷ್ಕೃತ ಮಹಾಯೋಜನೆ–2021' ರ ತಯಾರಿಕೆ ಕಾರ್ಯ ಪೂರ್ಣಗೊಂಡು ಅನುಮೋದನೆಯಾಗಿ ಜಾರಿಗೆ ಬರುವವರೆಗೆ ಹಾಲಿ ಚಾಲ್ತಿಯಲ್ಲಿರುವ 'ಅನುಮೋದಿತ ಮಹಾಯೋಜನೆ–2021'ರ ಊರ್ಜಿತಾವಧಿಯನ್ನು ವಿಸ್ತರಿಸುವ ಕುರಿತು ಸರ್ಕಾರದ ಅನಮೋದನೆಗಾಗಿ ಪತ್ರ ಸಂಖ್ಯೆ: ಬಿಐಎಎಪಿಎ/ಟಿಪಿ/ಮ.ಯೋ.ಪ/01/2013–14/2020–21/1925 ದಿನಾಂಕ: 06/12/2022 ರಲ್ಲಿ ಪ್ರಸ್ತಾವನೆಯನ್ನು **"ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ"** ರವರಿಗೆ ದಿನಾಂಕ06/12/2022ರಂದು ಸಲ್ಲಿಸಿರುತ್ತಾರೆ. ಮುಂದುವರೆದು ಪ್ರಾಧಿಕಾರದ ಪತ್ರ ಸಂಖ್ಯೆ:ಬಿಐಎಎಪಿಎ/ಟಿಪಿ/ಮ.ಯೋ.ಪ/01/2013–14/2020–21/673 ದಿನಾಂಕ:27.06.2023 ರನ್ವಯ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ "ಪರಿಷ್ಕೃತ ಮಹಾಯೋಜನೆ 2031"ರ ಕಾರ್ಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ (5)ರಡಿಯಲ್ಲಿ ಹಾಲಿ ಭೂಉಪಯೋಗ ನಿರ್ಧರಣಾ ದಿನಾಂಕವನ್ನು 11.11.2021ರಂದು ನಿಗಧಿ ಪಡಿಸಿ

ಘೋಷಿಸುವಂತೆ ಅಧಿಸೂಚನೆ ಹೊರಡಿಸುವ ಕುರಿತು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ 9(1)ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಗಾಗಿ ಸರ್ವೆ ಕಾರ್ಯ ಪ್ರಾರಂಭಿಸುವ ಪೂರ್ವದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಯ ಇಚ್ಛೆಯನ್ನು ಘೋಷಿಸಿ (Declaration of Intention of Making Master Plan), 60 ದಿನಗಳ ಅವಧಿಗೆ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿ ಕರ್ನಾಟಕ ರಾಜ್ಯ ಪತ್ರ ಹಾಗೂ ಒಂದು ಅಥವಾ ಹೆಚ್ಚಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ನೀಡಿ, ಮಹಾಯೋಜನೆ ತಯಾರಿಕೆ ಇಚ್ಛೆಯ ಪ್ರಕಟಣೆ, ಮಹಾಯೋಜನೆ ತಯಾರಿಸಬೇಕಾಗಿರುವ ಸ್ಥಳೀಯ ಯೋಜನಾ ಪ್ರದೇಶ ಎಲ್ಲೆಗಳ ವಿವರಗಳಿರುವ ನಕ್ಷೆ ಹಾಗೂ ಯೋಜನಾ ಪ್ರಾಧಿಕಾರದ ನಡವಳಿಕೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಮುಂದುವರೆದು, BIAAPAಕ್ಕೆ ಜಿಐಎಸ್ ಆಧಾರಿತ ವೈಜ್ಞಾನಿಕ ಮಹಾಯೋಜನೆ ಸಿದ್ಧಪಡಿಸುವ ಸಂಬಂಧ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಿಯಿಕ ಕೇಂದ್ರ ರವರಿಂದ ಸ್ಥಳೀಯ ಯೋಜನಾ ಪ್ರದೇಶದ ಮೂಲ ನಕ್ಷೆ ಪಡೆದು ಸದರಿ ಮೂಲ ನಕ್ಷೆಯನ್ನು ಕಾಲೋಚಿತಗೊಳಿಸಲು Geo Referenced ಹಾಗೂ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆ ತಯಾರಿಸಲು ಕ್ರಮ ಕೈಗೊಳ್ಳಲು ಹಾಗೂ ಹಾಲಿ ಉಪಯೋಗದ ಪರಿವೀಕ್ಷಣಾ ಕಾರ್ಯಕೈಗೊಳ್ಳಲು ಕ್ರಮವಹಿಸಲು ಸೂಚಿಸಿದೆ.

29.2023–24ನೇ ಸಾಲಿಗೆ ನ್ಯಾಯಾಲಯಗಳಲ್ಲಿ ನಡೆಯುತ್ತಿರುವ ಪ್ರಕರಣಗಳ ಬಗ್ಗೆ:–

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ 2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ 49 ಪ್ರಕರಣಗಳು ಹಾಗೂ ಸಿವಿಲ್‌ನ್ಯಾಯಾಲಯದಲ್ಲಿ 08 ಪ್ರಕರಣಗಳಂತೆ ಒಟ್ಟು 57 ಪ್ರಕರಣಗಳು ಬಾಕಿ ಇರುವುದು ಕಂಡುಬಂದಿರುತ್ತದೆ.

30. ಕಛೇರಿ ಬಾಡಿಗೆ ಪಾವತಿ ವಿವರ :

ಪ್ರಾಧಿಕಾರವು ತನ್ನ ಸ್ವಂತ ನಿವೇಶನ ಹಾಗೂ ಕಟ್ಟಡ ಹೊಂದಿಲ್ಲದ ಕಾರಣ ಈ ಕೆಳಕಂಡ ಖಾಸಗಿ ಕಟ್ಟಡದ ವಿಳಾಸದಲ್ಲಿ ಮಾಸಿಕ ಬಾಡಿಗೆ ಆಧಾರದ ಮೇಲೆ ಕಚೇರಿ ಕೆಲಸ ನಿರ್ವಹಿಸಿಕೊಂಡು ಬರಲಾಗುತ್ತಿದೆ. ಸದರಿ ಸಾಲಿನಲ್ಲಿ ಕಛೇರಿ ಬಾಡಿಗೆಗೆ ಸಂಬಂಧಿಸಿದ ವಿವರ ಈ ಮುಂದಿನಂತಿರುತ್ತದೆ.

01.	ಕಟ್ಟಡದ ಮಾಲೀಕರು	ಶ್ರೀ ಎನ್.ರಾಮಚಾರಿ
02.	ಕಟ್ಟಡದ ವಿಳಾಸ	ನಂ. 333/1, ವಿ.ಜೆ. ಕಾಂಪ್ಲೆಕ್ಸ್, 1ನೇ ಮಹಡಿ, ಸೂಲಿಬೆಲೆ ರಸ್ತೆ, ದೇವನಹಳ್ಳಿ.
03.	ಬಾಡಿಗೆ ಪಡೆದಿರುವ ಜಾಗದ ವಿಸ್ತೀರ್ಣ	2535+734.95 ಚ.ಅಡಿ
04.	ನಿಗಧಿಯಾದ ಮಾಸಿಕ ಬಾಡಿಗೆ	ರೂ. 39,700/– (2535 ಚ.ಅಡಿ ಕಛೇರಿ) ರೂ. 6940/– (734.95 ಸಭಾಂಗಣ)
05.	ಬಾಡಿಗೆ ನಿಗಧಿಪಡಿಸಿದ ಅಧಿಕಾರಿ ಹಾಗೂ ಪತ್ರ ಸಂಖ್ಯೆ	ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಪತ್ರ ಸಂಖ್ಯೆ: ಕಾ.ಅ/ಲೋಇ/ಬೆಂ.ವಿ./ಎ.ಇ–2/ಬಾಡಿಗೆ ನಿಗದಿ/2015–16/382 ದಿ: 19–05–2015 ರೂ. 9800 (38.28 ಚ.ಮೀ)

06.	ಪ್ರಾಧಿಕಾರದ ಸಭೆ ಅಂಗೀಕಾರ ದಿನಾಂಕ:	ಪ್ರಾಧಿಕಾರದ 103ನೇ ಸಭೆಯ ನಡವಳಿ 103 (15) ರ ತೀರ್ಮಾನದಂತೆ ಪ್ರಾಧಿಕಾರದ 117ನೇ ಸಭೆಯ ವಿಷಯ ಸಂಖ್ಯೆ (14) ರ ತೀರ್ಮಾನದಂತೆ (ದಿನಾಂಕ: 20-01-2017) ಕಾನಿಇಂ/ಬೆಂವಿ/ಎಇ-2-2016-17/2598 18/08/2018
07.	ಅಗ್ರಿಮೆಂಟ್ ವಿವರ	ಲೋಕೋಪಯೋಗಿ ಇಲಾಖೆಯವರು ನಿಗಧಿಪಡಿಸಿದ ಮಾಸಿಕ ಬಾಡಿಗೆ ರೂ.39,700/-ಗಳನ್ನು ದಿ:02-07-2015 ರಂದು ಬಾಡಿಗೆ ಕರಾರು ಪತ್ರದಂತೆ ಪಾವತಿಸುವುದು. ಹಾಗೂ ದಿನಾಂಕ: 25-03-2017ರ ಬಾಡಿಗೆ ಕರಾರು ಪತ್ರದಂತೆ ಸಭಾಂಗಣಕ್ಕೆ ರೂ. 6940/- ಗಳನ್ನು ಪಾವತಿಸುವುದು. 122 ಸಭೆ ವಿ.ಸಂ. 12 (5)
08.	ಮುಂಗಡ ನೀಡಿಕೆ	28/09/2018.

2023-24ನೇ ಸಾಲಿಗೆ ಕಟ್ಟಡದ ಮಾಲೀಕರಿಗೆ 12 ತಿಂಗಳ ಬಾಡಿಗೆ ರೂ. **7,99,188**/- ಗಳ ಮೊತ್ತದಲ್ಲಿ ರೂ. **93,468**/- ಗಳ ಟಿಡಿಎಸ್ ಕಟಾಯಿಸಿಕೊಂಡು ಉಳಿಕೆ ರೂ. **7,05,720**/- ಗಳನ್ನು ಚೆಕ್ ಮೂಲಕ ಪಾವತಿಸಲಾಗಿರುವುದು ಕಂಡುಬಂದಿರುತ್ತದೆ.

31. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ಮಂಜೂರಾದ ಹುದ್ದೆಗಳ ವಿವರ:

ಸರ್ಕಾರದ ಆದೇಶದಲ್ಲಿ ಪ್ರಾಧಿಕಾರಕ್ಕೆ ತಾತ್ಕಾಲಿಕವಾಗಿ ಸೃಜಿಸಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಮುಂದುವರೆಸಲಾದ ತಾತ್ಕಾಲಿಕ ಹುದ್ದೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ಹುದ್ದೆ ಪದನಾಮ	ಹುದ್ದೆ ಸಂಖ್ಯೆ	ಸರ್ಕಾರದಿಂದ ಹುದ್ದೆಗಳನ್ನು ಮುಂದುವರೆಸಲು ಆದೇಶಿಸಿರುವ ಅವಧಿ
1.	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು.	01-ಹುದ್ದೆ	01-04-2023 ರಿಂದ 31-03-2024
2.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು.	01-ಹುದ್ದೆ	01-04-2022 ರಿಂದ 31-03-2024
3.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01-ಹುದ್ದೆ	01-04-2022 ರಿಂದ 31-03-2024
4.	ನಗರ ಯೋಜಕರು	03-ಹುದ್ದೆ	01-04-2023 ರಿಂದ 31-03-2024
5.	ಸಹಾಯಕ ನಗರ ಯೋಜಕರು	01-ಹುದ್ದೆ	01-04-2023 ರಿಂದ 31-03-2024
6.	ಪ್ರಥಮ ದರ್ಜೆ ಸಹಾಯರು	01-ಹುದ್ದೆ	01-04-2023 ರಿಂದ 31-03-2024
7.	ದ್ವಿತೀಯ ದರ್ಜೆ ಸಹಾಯರು	01-ಹುದ್ದೆ	01-04-2023 ರಿಂದ 31-03-2024

8.	ಬೆರಳಚ್ಚುಗಾರ	02–ಹುದ್ದೆ	01–04–2023 ರಿಂದ 31–03–2024
9.	ವಾಹನ ಚಾಲಕರು	01–ಹುದ್ದೆ	01–04–2023 ರಿಂದ 31–03–2024
10.	ಸೇವಕರು	01–ಹುದ್ದೆ	01–04–2023 ರಿಂದ 31–03–2024
11.	ಸೇವಕರು	01–ಹುದ್ದೆ	01–04–2023 ರಿಂದ 31–03–2024
12.	ಡೇಟಾ ಎಂಟ್ರಿ ಆಪರೇಟರ್	01–ಹುದ್ದೆ	01–04–2023 ರಿಂದ 31–03–2024
ಒಟ್ಟು		**15–ಹುದ್ದೆ**	

ಸರ್ಕಾರದ ಆದೇಶ ಸಂಖ್ಯೆ: ನಅಇ 47 ಬಿಎಂಆರ್ 2022(ಇ), ಬೆಂಗಳೂರು ದಿನಾಂಕ: 08/07/2022ರಂತೆ ಮೇಲ್ಕಂಡ ಸದರಿ ಹುದ್ದೆಗಳನ್ನು ಕ್ರಮವಾಗಿ ದಿನಾಂಕ: 31–03–2024 ಹಾಗೂ 29–12–2023 ರವರೆಗೆ ಮುಂದುವರೆಸಲು ಕೆಲವು ನಿಬಂಧನೆಗೊಳಪಟ್ಟು ತಾತ್ಕಾಲಿಕವಾಗಿ ಮುಂದುವರೆಸಲು ಮಂಜೂರಾತಿ ನೀಡಲಾಗಿದೆ.

32. ಪಿಂಚಣಿ ವಂತಿಕೆ ವಿವರ :

ಕೆಸಿಎಸ್ಆರ್ ನಿಯಮ 427 ರಂತೆ ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಪಿಂಚಣಿ ವಂತಿಕೆಯನ್ನು 2023–24 ನೇ ಸಾಲಿನ ವೇತನ ಬಟವಾಡೆ ವಹಿ ಪರಿಶೀಲಿಸಲಾಗಿ ಏಪ್ರಿಲ್–2023 ರಿಂದ ಮಾರ್ಚ್–2024 ರವರೆಗೆ ಪಾವತಿಸಿರುವ ವೇತನದ ಆಧಾರದ ಮೇಲೆ ಪಿಂಚಣಿ ವಂತಿಕೆಯನ್ನು (ಸರಾಸರಿ ವೇತನದ 1/8 ಭಾಗ) ಹಾಗೂ ರಜೆ ವೇತನದ ವಂತಿಕೆಯನ್ನು (ಸರಾಸರಿ ವೇತನದ ಶೇ.11) ಮತ್ತು ನೂತನ ಪಿಂಚಿಣಿ ವಂತಿಕೆಯನ್ನು (ಮೂಲ ವೇತನ + ತುಟ್ಟಿ ಭತ್ಯೆಯ ಒಟ್ಟು ಮೊತ್ತಕ್ಕೆ ಶೇ.10 ನೌಕರರ ವಂತಿಕೆ ಮತ್ತು ಶೇ.10 ಸರ್ಕಾರದ ವಂತಿಕೆ) ಸಂಬಂದಿಸಿದ ನಿಧಿಗಳಿಗೆ ಜಮೆ ಮಾಡಬೇಕಾಗಿದ್ದು, ಪ್ರಸ್ತಕ ಸಾಲಿನಲ್ಲಿ ಜಮೆ ಮಾಡಬೇಕಾಗಿರುವ ಮೊತ್ತವನ್ನು ಮಹಾ ಲೇಖಪಾಲರಿಗೆ ದಿನಾಂಕ: 04/04/2024 ರಂದು ಪಾವತಿ ಮಾಡಲಾಗಿರುತ್ತದೆ. ಅಧಿಕಾರಿ/ನೌಕರರವಾರು ವಿವರಗಳನ್ನು ಅನುಬಂಧ–05ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.

33. ಮಾಹಿತಿ ಹಕ್ಕು ಅಧಿನಿಯಮದಡಿ ಸಂಗ್ರಹಿಸಿರುವ ಮೊಬಲಗನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿರುವುದು:

2023–24ನೇ ಸಾಲಿಗೆ ಮಾಹಿತಿ ಹಕ್ಕು ಅಧಿನಿಯಮದಡಿ (ಆರ್.ಟಿ.ಐ) ಒಟ್ಟು ರೂ. 45,731/– ಸಂಗ್ರಹವಾಗಿರುವುದು ಕಂಡುಬಂದಿರುತ್ತದೆ. ಅದರಲ್ಲಿ IPO ಮೊತ್ತವು ರೂ. 1260/– ಅರ್ಜಿದಾರರು ಕೋರಿರುವ ಮಾಹಿತಿಗನುಗುಣವಾಗಿ ಸ್ವೀಕೃತಿಯಾದ ಮಾಹಿತಿ ಹಕ್ಕು ಅಧಿನಿಯಮ ಶುಲ್ಕವನ್ನು ಸರ್ಕಾರ ನಿಗದಿಪಡಿಸಿರುವ ಲೆಕ್ಕಶೀರ್ಷಿಕೆ 0070–60–118–0–01 ಜಮೆ ಮಾಡಬೇಕಾಗಿರುತ್ತದೆ, ಅದರಂತೆ ಪ್ರಸಕ್ತ ಸಾಲಿನ ಮಾಹಿತಿ ಹಕ್ಕಿನ ಅಧಿನಿಯಮದ ಮೊತ್ತ ರೂ. 860/– ಗಳನ್ನು ದಿನಾಂಕ: 10/10/2023 ರಂದು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮಾ ಮಾಡಲಾಗಿರುತ್ತದೆ.

34. ಪ್ರಾಧಿಕಾರದ ಲೆಕ್ಕ ತನಿಖಾ ಶುಲ್ಕ :

ಪ್ರಾಧಿಕಾರದ 2023–24ನೇ ಸಾಲಿನ ಲೆಕ್ಕ ತಪಾಸಣೆಯನ್ನು ಕೈಗೊಂಡಿದ್ದು ಸದರಿ ಲೆಕ್ಕ ತಪಾಸಣೆಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಲೆಕ್ಕ ತನಿಖಾ ಶುಲ್ಕದ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ.ಗಳಲ್ಲಿ)

ಕ್ರ.ಸಂ.	ವಿವರ	ಒಟ್ಟು ವಹಿವಾಟು ಮೊತ್ತ
1	2023–24ರ ಒಟ್ಟು ಜಮಾ ಮೊತ್ತ	785125258
2	2023–24ರ ಒಟ್ಟು ಖರ್ಚು	56779234
	ಒಟ್ಟು	**841904492**

ಜಮೆಯಲ್ಲಿ ಕಳೆಯಬೇಕಾದದ್ದು

1	ವೇತನ & ಭತ್ಯೆಗಳ ಹಿಂಪಾವತಿ (ಹೊರಗುತ್ತಿಗೆ ಸೇರಿ)	326686
2	ಹೂಡಿಕೆ ಹಿಂಪಾವತಿ	270246219
3	ಕಟ್ಟಡ ನಕ್ಷೆ ಅನುಮೋದನೆ ಭದ್ರತಾ ಠೇವಣಿ	16296819
4	ಆರ್.ಟಿ.ಐ. ಸ್ವೀಕೃತಿ ಬಾಬ್ತು	45731
5	ಎಂ.ಒ.ಡಿ ಸ್ವೀಕೃತಿ	1063464
	ಒಟ್ಟು	**287978919**

ವೆಚ್ಚಗಳಲ್ಲಿ ಕಳೆಯಬೇಕಾದದ್ದು

1	ವೇತನ & ಭತ್ಯೆಗಳ ಪಾವತಿ	9280858
2	ಲೆಕ್ಕಪರಿಶೋಧನಾಶುಲ್ಕ ಪಾವತಿಸಿರುವುದು	924474
3	ಅನುದಾನ ಮೊತ್ತ	19135559
4	ಭದ್ರತಾ ಠೇವಣಿ ಹಿಂಪಾವತಿ	1864470
5	ಆರ್.ಟಿ.ಐ. ಪಾವತಿ ಬಾಬ್ತು	860
6	ಇತರೆ	14452040
	ಒಟ್ಟು	**45658261**

1	ಒಟ್ಟು ಜಮೆ & ಖರ್ಚು ಮೊತ್ತ	841904492
2	ಒಟ್ಟು ಜಮೆ ಮತ್ತು ಖರ್ಚುಗಳಲ್ಲಿ ಕಳೆಯಬೇಕಾದ ಮೊತ್ತ	333637180
3	ಒಟ್ಟು ನಿವ್ವಳ ಮೊತ್ತ	**508267312**

ಲೆಕ್ಕಾ ತನಿಖಾ ಶುಲ್ಕ ಲೆಕ್ಕಾಚಾರ	ಒಟ್ಟು ನಿವ್ವಳ ಮೊತ್ತ 0.20%
2023–24 ನೇ ಸಾಲಿಗೆ ತನಿಖಾ ಶುಲ್ಕ	**508267312 x 0.20 / 100**
ವಾರ್ಷಿಕ ಆಡಿಟ್ ಶುಲ್ಕ	**ರೂ. 1016535**

ದಿನಾಂಕ: 01–04–2023 ಕ್ಕೆ ಪ್ರಾರಂಭಿಕ ಶಿಲ್ಕು	1,16,741
2023–24 ರ ಲೆಕ್ಕಪರಿಶೋಧನಾಶುಲ್ಕದ ಮೊತ್ತ	1016535
ಒಟ್ಟು ಶುಲ್ಕ	**11,33,276**
2023–24 ರಲ್ಲಿ ಲೆಕ್ಕಪರಿಶೋಧನಾಶುಲ್ಕದ ಪಾವತಿಗಳು	11,33,276
ದಿನಾಂಕ: 31–03–2024 ಕ್ಕೆ ಅಖ್ಯೈರು ಶಿಲ್ಕು	**0.00**

2019–20ನೇ ಸಾಲಿನ ಲೆಕ್ಕಪರಿಶೋಧನೆ ಸಮಯದಲ್ಲಿ ಲೆಕ್ಕ ಪರಿಶೋಧನಾ ಶುಲ್ಕ ಲೆಕ್ಕಾಚಾರಕ್ಕೆ ಪರಿಗಣಿಸಲಾಗಿರುವ ನಿವ್ವಳ ಮೊತ್ತದಲ್ಲಿ ರೂ.1,16,741/–ಗಳನ್ನು ಕಡಿಮೆ ಲೆಕ್ಕಾಚಾರ ಮಾಡಿರುವುದರಿಂದ ಪ್ರಸ್ತುತ ಸಾಲಿನಲ್ಲಿ ಸದರಿ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಂಡು ಲೆಕ್ಕಪರಿಶೋದನಾ ಶುಲ್ಕವನ್ನು ಲೆಕ್ಕಾಚಾರ ಮಾಡಲಾಗಿರುತ್ತದೆ.

2024ರ ಮಾರ್ಚ್ ಅಂತ್ಯಕ್ಕೆ ಬಾಕಿ ಇರುವ ಲೆಕ್ಕಪರಿಶೋಧನಾ ಶುಲ್ಕದ ಒಟ್ಟಾರೆ ಮೊತ್ತ ರೂ.**1133276**/–ಗಳಾಗಿದ್ದು, ಸದರಿ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ದಿನಾಂಕ:04.07.2024ರಂದು ಪಾವತಿಸಿ, ಬ್ಯಾಂಕ್ ಚಲನ್ (ಸಂಖ್ಯೆ:CR07240070000058516/58686)ರಂತೆ ಪಾವತಿಸಿ ಪ್ರತಿಯನ್ನು ಸಲ್ಲಿಸಲಾಗಿರುತ್ತದೆ.

35. ಸಾಮಾನ್ಯ ಅಭಿಪ್ರಾಯ:

1. ಪ್ರತ್ಯೇಕ ಖಾತೆವಾರು (ಯೋಜನೆವಾರು) ನಗದು ಪುಸ್ತಕ ನಿರ್ವಹಿಸುವುದು.
2. ನಗದು ವಹಿಯನ್ನು ಕರ್ನಾಟಕ ಆರ್ಥಿಕ ಸಂಹಿತೆ 328 ರಿಂದ 332 ರಂತೆ ಕ್ರಮವಹಿಸಿ ನಿರ್ವಹಿಸುವುದು.
3. ಪ್ರಾಧಿಕಾರವು ಭೂ ಅಭಿವೃದ್ಧಿದಾರರು RERA ದಲ್ಲಿ ನೊಂದಣಿ ಮಾಡಿರುವ ಬಗ್ಗೆ ಪ್ರಸಕ್ತ ಸಾಲಿನಲ್ಲಿ ಖಾತರಿಪಡಿಸಿಕೊಂಡಿರುವುದು ಕಂಡುಬಂದಿರುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಖಾತರಿಪಡಿಸಿಕೊಂಡು ಅನುಮೋದನೆ ನೀಡುವುದು.
4. ವಿವಿಧ ಬ್ಯಾಂಕುಗಳಲ್ಲಿ ತೊಡಗಿಸಿರುವ ಎಫ್‌ಡಿಆರ್ ಮೊತ್ತ ಪಕ್ವವಾದ ಮೊತ್ತ ಬ್ಯಾಂಕ್ ಲೆಕ್ಕ ಸಮನ್ವಯ ಮಾಡುವುದು.
5. ಬ್ಯಾಂಕಿನಿಂದ ಖಾತೆವಾರು ಪ್ರತಿ ಮಾಹೆ ಪ್ರತ್ಯೇಕ ಬ್ಯಾಂಕು ಪಾಸ್‌ಶೀಟ್ ಪಡೆದು ಕಡ್ಡಾಯವಾಗಿ ಲೆಕ್ಕ ಸಂಕಲನ ಮಾಡುವುದು.

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಬೆಂಗಳೂರು

ಅನುಬಂಧ - 01

ಕರ್ನಾಟಕ ಸರ್ಕಾರ

Government of Karnataka

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ (BIAAPA)

2023–24 ನೇ ಸಾಲಿನ ಅಂದಾಜು ಆಯವ್ಯಯ

ವಿಳಾಸ : ನಂ.333/1, ಮೊದಲನೇ ಮಹಡಿ, ವಿ.ಜೆ.ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ,

ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಇ–ಮೇಲ್: biaapa.devanahalli@gmail.com

ಜಾಲತಾಣ: www.biaapa.tpa.gov.in

FORM IV

BANGALORE INTERNATIONAL AIRPORT AREA PLANNING AUTHORITY DEVANAHALLI

Abstract Figures of the Budget For the year 2023-24

Statement No I

Details	Accounts of the past Year 2021-22	Probable estimates for the year 2022-23	Revised estimate For the year 2022-23			Budget total Estimates for the Year 2023-24 (In Rs)
			Actual for 01-04-2022 to 30-11-2022	Probable for 01-12-2022 to 31-03-2023	Total (In Rs)	
1	2	3	4	5	6	7
Opening Balance	**983645**	**35864645**				**9235645**
Ordinary section						
Capital section						
Receipts						
Ordinary section	315181000	401071000	371058328	185529164	556587492	618150000
Capital section	2720000000	3110000000	3524000000	300000000	3824000000	3500000000
Total Receipt	**3036164645**	**3546935645**	**3895058328**	**485529164**	**4380587492**	**4127385645**
Expenditure						
Ordinary section	247900000	257700000	100766258	189654017	290420275	298650000
Capital section	2752400000	3280000000	3524000000	538500000	4062500000	3818500000
Total Expenditure	**3000300000**	**3537700000**	**3624766258**	**728154017**	**4352920275**	**4117150000**
Closing balance	**35864645**	**9235645**				**10235645**

Joint Director of Town & Country
Planning & Member Secretary,
Bangalore International Airport
Area Planning Authority,
Devanahalli

8/12/23

BANGALORE INTERNATIONAL AIRPORT AREA PLANNING AUTHORITY DEVANAHALLI

FORM IV

ESTIMATES OF RECIEPTS

STATEMENTS II

Details	Accounts of the year Year 2021-22	Probable estimates for the year 2022-23	Revised estimate For the year 2022-23			Budget total Estimates for the Year 2023-24 (In Rs)
			Actual for 01-04-2022 to 30-11-2022	Probable for 01-12-2022 to 31-03-2023	Total (In Rs)	
1	2	3	4	5	6	7
Opening Balance	983645	35864645				9235645
Ordinary section						
Capital section						
1. Rent of land						
2. Ground Rent						
3. Produce of Land						
4. Betterment Contribution	50000000	100000000	87498652	43749326	131247978	120000000
a) Building Plan approval Fees	300000	6000000	2840360	1420180	4260540	50000000
5. M.R.T.S (Mass Rapid Transport System) cess	40000000	50000000	51534460	25767230	77301690	75000000
6. water supply scheme cess	15000000	12000000	10308570	5154285	15462855	20000000
7. Ring road cess	15000000	12000000	10308570	5154285	15462855	20000000
8. Slum Improvement cess	7500000	6000000	5155180	2577590	7732770	10000000
9)Sale of Application / Extra	40000	30000	58940	29470	88410	75000
10) Security Deposit for S.T.P Works	0	0	0	0	0	
11) Security Deposit for Building Plan approval Fees	12000000	15000000	28814390	14407195	43221585	50000000
12. Bank Interest S/B	20000000	1000000	4577712	2288856	6866568	7500000
12 a. Bank Interest FD	130000000	150000000	111032017	55516009	166548026	170000000
13. Rejuvenation of tanks Fees	15000000	30000000	35981970	17990985	53972955	60000000
14.Paper notification fee	5000000	5000000	5643328	2821664	8464992	9000000
15. Sale of Master Plan & Z R	6000	6000	7400	3700	11100	10000
16. Layout Renewal charges	800000	5000000	1659210	829605	2488815	2500000
17. A penalty for releasing of sites ofter 5 years	2000000	2000000	9899240	4949620	14848860	15000000
18. Fee for issuing certified copies	15000	15000	34351	17176	51527	50000
19. Scrutiny fee	2500000	5000000	4317287	2158644	6475931	6500000
20. Rti fee	20000	20000	9797	4899	14696	15000
21. Road Fee	0	0	0	0	0	
22. Other Fee	0	2000000	1376894	688447	2065341	2500000
(a) Total Ordinary receipts	315181000	401071000	371058328	185529164	556587492	618150000
A. Net Total Ordinary section	316164645	436935645	371058328	185529164	556587492	627385645

CAPITAL SECTION						
Opening Balance						
II. Town Planning Act Scheme						
Government Grants						
1. Contribution from -						
a) Government Departments					0	
b) Other local authority					0	
c) Private person					0	
2. Sales, proceeds of lands, buildings and equipment					0	
3. Loans					0	
4. Investment realization (Maturity)	2720000000	3110000000	3524000000	300000000	3824000000	3500000000
5. Multiple account deposit					0	
6. Recoveries of advances					0	
7. Recoveries of expenses of enforcement under section 47(2)					0	
8. Contribution from surplus in ordinary section.					0	
(B) Total Capital receipts	2720000000	3110000000	3524000000	300000000	3824000000	3500000000
(C) Grand Total –ordinary +capital receipts	3156935645	3110000000	3895058328	485529164	4380587492	4127385645

Joint Director of Town & Country
Planning & Member Secretary,
Bangalore International Airport
Area Planning Authority,
4/2/23 **Devanahalli**

BANGALORE INTERNATIONAL AIRPORT AREA PLANNING AUTHORITY DEVANAHALLI

Form IV

Statement No III

Estimate of Expenditure

Expenditure	Accounts of the past Year 2021-22	Sanctioned estimates for the year 2022-23	Estimate For the year 2022-23			Budget total Estimates for the Year 2023-24 (In Rs)
